# ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಜಾನಪದವು ವಿಶ್ವದಷ್ಟೇ ವಿಶಾಲ ಹಾಗೂ ಆದಿಮಾನವನಷ್ಟೇ ಪ್ರಾಚೀನವಾಗಿದೆ. ಮಾನವ ಜೀವನದ ಸಮಸ್ತ ಅಂಶಗಳು ಜಾನಪದದಲ್ಲಿ ಸಮಾವೇಶಗೊಂಡಿವೆ. ಒಂದು ಕಾಲಕ್ಕೆ ಗೊರವರ ದುಂಡುಚಿ ಬೀದಿವರೆವ ಬೀರನ ಕತೆ ಎಂದು ಅವಹೇಳನಕ್ಕೆ ಒಳಗಾಗಿದ್ದ ಜಾನಪದವು ಜಗತ್ತಿನ ಮೇರು ಪರ್ವತದಷ್ಟೇ ಉನ್ನತವಾಗಿ ಎಲ್ಲರ ಮೆಚ್ಚುಗೆಯನ್ನು ಪಡೆದಿದೆ. ಜಾನಪದವು ಇಂದು ಅಧ್ಯಯನದ ವಿಷಯವಾಗಿ ಬೆಳೆಯುತ್ತಿದೆ. ಅದರ ಅಧ್ಯಯನವು ವಿಸ್ತೃತವಾಗಿದ್ದು, ಹೊಸ ಹೊಸ ಚಿಂತನೆ ಶೋಧನೆಗಳಿಂದ ಹಲವು ತರದ ಬೆಳಕನ್ನು ಹೊರಹಾಕುತ್ತಿದೆ. ಜಾನಪದದ ಇತರ ಜ್ಞಾನ ಶಾಖೆಗಳಾದ ಮಾನವಶಾಸ್ತ್ರ, ಸಮಾಜಶಾಸ್ತ್ರ, ಭಾಷಾವಿಜ್ಞಾನ, ಇತಿಹಾಸ ಹಾಗೂ ಕಲೆ ಮುಂತಾದ ಅಧ್ಯಯನದ ವಿಧಾನಗಳನ್ನು ಮೈಗೂಡಿಸಿಕೊಂಡು ಅನೇಕ ವಿದ್ವಾಂಸರನ್ನು ಆಕರ್ಷಿಸುವ ಜ್ಞಾನದ ಅಮೂಲ್ಯ ಗಣಿಯೆನಿಸಿದೆ. ಕರ್ನಾಟಕದ ಜಾನಪದವು ವಿದ್ವಾಂಸರ ಗಂಭೀರ ಅಧ್ಯಯನದ ಫಲದಿಂದ ಹುಲುಸಾಗಿ ಬೆಳೆದು ಸಮೃದ್ಧಗೊಂಡಂತಾಗಿದೆ. ಈ ನೆಲೆಯಲ್ಲಿ ಇನ್ನೂ ಹಲವು ಅಧ್ಯಯನಗಳು ಪ್ರಾದೇಶಿಕವಾಗಿ ನಡೆಯಬೇಕಾಗಿದೆ. ಅಂಥ ಅಧ್ಯಯನಗಳಲ್ಲಿ **"ಬೀದರ ಜಿಲ್ಲೆಯ ಜನಪದ ಕಲೆಗಳು"** ಕುರಿತ ಅಧ್ಯಯನವು ಪ್ರಮುಖವಾಗುತ್ತದೆ.

ಜಾನಪದದ ಮೂಲ ನೆಲೆ ಪ್ರಕೃತಿ. ಅದು ಹಲವು ಜೀವಿಗಳಿಗೆ ಆಶ್ರಯ ನೀಡಿ ಕಾಪಾಡುತ್ತಿದೆ. ಜೀವರಾಶಿಗಳಲ್ಲಿ ಮನುಷ್ಯ ಶ್ರೇಷ್ಠನಾಗಿದ್ದಾನೆ. ಎಲ್ಲಕ್ಕೂ ಒಡೆಯನಾಗಿ ಪ್ರಕೃತಿಯೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದ್ದಾನೆ. ಮಾನವನು ನುಡಿಯಲು, ಹಾರಾಡಲು, ಕೂಗಾಡಲು, ಹಾಡಲು ಮುಂತಾದವುಗಳಿಗೆ ಪ್ರಕೃತಿ ಪ್ರೇರಕ ಶಕ್ತಿಯಾಗಿದ್ದು, ಮಾನವರಲ್ಲಿ ವಿಶಿಷ್ಟ ವ್ಯಕ್ತಿತ್ವವನ್ನು ಅರಳಿಸಲು ಸಹಾಯಕವಾಗಿದೆ. ಕರ್ನಾಟಕದ ಪ್ರಾಕೃತಿಕ ಸಂಪತ್ತು ವೈವಿಧ್ಯತೆಯಿಂದ ಅರಳಿ ನಿಂತಿದೆ. ಈ ಹಿನ್ನೆಲೆಯಲ್ಲಿ "ಬೀದರ ಜಿಲ್ಲೆಯ ಜನಪದ ಕಲೆಗಳು" ಅಧ್ಯಯನ ಪೂರ್ಣವೆನಿಸುತ್ತದೆ.

ಎಲ್ಲ ಜೀವರಾಶಿಗಳಲ್ಲಿ ಮಾನವ ಪ್ರಮುಖವಾಗಿದ್ದಾನೆ. ನಿಸರ್ಗದ ಒಡನಾಟದಲ್ಲಿರುವ ಅವನು ಅದರ ಸಹಜ ಸುಂದರತೆಗೆ ಮನಸೋತಿದ್ದಾನೆ. ಅಲ್ಲಿ ತುಂಬಿ ನಿಂತಿರುವ ಚೆಲುವನ್ನು ಸವಿಯಲು ಎರಡು ಕಣ್ಣುಗಳಿದ್ದರೆ ಸಾಲದು. ಅದನ್ನು ಅನುಭವಿಸಲು ವಿಶಾಲವಾದ ಹೃದಯ ಮನಸ್ಸು ಬೇಕು. ಮನುಷ್ಯನ ಬದುಕು ಬಹು ಮುಖ್ಯವೆಂದು ಅರಿತ ಮಾನವ ಅದಕ್ಕೊಂದು ಚೆಲುವಾದ ಬಣ್ಣವನ್ನು ನೀಡಿದ. ಆ ಬಣ್ಣ ಎರಡು ಕಣ್ಣುಗಳನ್ನು ತುಂಬಿದಾಗ ಹೃದಯಕ್ಕೆ ಆನಂದ ಉಂಟಾಗುತ್ತದೆ. ಆಗ ಮನಸ್ಸು ಸಹಜವಾದ ಚೆಲುವಿಕೆಗೆ ಮರುಳಾಗುತ್ತದೆ. ಮನುಷ್ಯ ಕಲೆಗಾರನಾಗಿ ಹೊರಹೊಮ್ಮಿ ಮನಸೆಳೆಯುತ್ತಾನೆ.

ಪ್ರಕೃತಿ ಪರಿಸರದೊಡನೆ ಬೆಳೆದ ಮಾನವ ಅದರ ಸಿಹಿ–ಕಹಿಗಳನ್ನು ತಾನುಂಡು ಅದನ್ನು ತನ್ನವರಿಗೆ ಹಂಚುವ ಹಂಬಲದಿಂದ ಆ ಅನುಭವಕ್ಕೆ ಅದರದೇ ಆದ ಒಂದು ಚೌಕಟ್ಟು ಹಾಕಿ ಅದನ್ನು ಹಿಡಿದಿಡಲು ಪ್ರಯತ್ನಿಸಿರಬಹುದು, ಅದೇ ಒಂದು ಕಲೆಯಾಗಿ ರೂಪಗೊಂಡಿರಬಹುದು. ಅದು ಸಂಗೀತ, ಚಿತ್ರ, ಶಿಲ್ಪ, ನೃತ್ಯ ಯಾವುದೇ ಆಗಿರಬಹುದು. ಅವನ ಅಭಿವ್ಯಕ್ತಿಯ ಒಂದಂಶವಾಗಿ ಆತನಿಗನಿಸಿದ್ದನ್ನು ಹೊರ ಹಾಕಿದ್ದರ ಫಲವೇ **'ಜನಪದ ಕಲೆ'** ಎನ್ನಬಹುದು. ಅವು ಈ ಮೊದಲು ಮಾನವನ ಆನಂದ, ಆತ್ಮ ಸಂತೋಷಕ್ಕಾಗಿ ಹುಟ್ಟಿಕೊಂಡಿರುವಂತವು. ಆ ಕಲೆಯನ್ನು ತನ್ನ ಬದುಕಿನ ಎಲ್ಲಾ ಸಂದರ್ಭಗಳಲ್ಲಿ ಬಳಸುತ್ತಾ ಬಂದಿದ್ದಾನೆ. ಜನಪದ ಕಲೆಗಳು ಮನುಷ್ಯನಿಗೆ ಗಾಳಿ, ಬೆಳಕು, ನೀರು ಆಹಾರದಷ್ಟೇ ಪ್ರಮುಖವಾಗಿ ಕಂಡು ಬಂದಿರಬೇಕು. ಈ ಕಲೆಗಳು ಮಾನವನ ಉಸುರಾಗಿ, ಅವನಿಗೆ ನಿರಂತರ ಚೈತನ್ಯ ನೀಡುವ ಚಿಲುಮೆಗಳಾಗಿವೆ. ಸಾವಿರಾರು

ವರುಷದ ಮನುಕುಲದ ಸಾಂಸ್ಕೃತಿಕ ಇತಿಹಾಸವನ್ನು ಅರಿಯುವಲ್ಲಿ ಸಹಾಯಕವಾಗುವಂತೆ ಬೆಳೆದು ಬಂದಿವೆ. ಒಂದು ನಾಡಿನ ವೈಶಿಷ್ಟ್ಯಪೂರ್ಣವಾದ ಸಾಹಿತ್ಯ, ಸಂಸ್ಕೃತಿ ಪರಿಚಯಿಸುವಲ್ಲಿ ಜನಪದ ಕಲೆಗಳು ಮಹತ್ವದಾಗುತ್ತವೆ. ಆ ಹಿನ್ನೆಲೆಯಲ್ಲಿ ಅವುಗಳನ್ನು ಅಧ್ಯಯನ ಮಾಡುವುದು ಇಲ್ಲಿನ ಉದ್ದೇಶವಾಗಿದೆ.

ಜನಪದ ಕಲೆಗಳು ಜನಸಮುದಾಯದ ಒಂದು ನಾಡಿನ, ಪ್ರದೇಶದ ಭವ್ಯ ಪರಂಪರೆಯನ್ನು ಶ್ರೀಮಂತಿಕೆಯನ್ನು ತಿಳಿಸಿಕೊಡಲು ಸಹಾಯಕವಾಗುತ್ತವೆ. ಜನಪದರ ಬದುಕಿಗೆ ತೀರಾ ಹತ್ತಿರವಾಗಿದ್ದು ಅವು ಪರಸ್ಪರರಲ್ಲಿ ಪ್ರೀತಿ, ವಿಶ್ವಾಸ, ಸಹಬಾಳ್ವೆ, ಸೌಹಾರ್ದಯುತ ಬದುಕನ್ನು ರೂಪಿಸುತ್ತವೆ. ಅವರ ಬದುಕಿನ ಏಕತಾನತೆ, ಬೇಸರ ನೀಗಿಸಿ ಅವರಲ್ಲಿ ವಿಶೇಷ ಶಕ್ತಿ ಹುರುಪು ನೀಡುತ್ತವೆ. ಜನಪದ ಕಲೆಗಳು ಜನಪದರ ಸಾಂಸ್ಕೃತಿಕ ಜೀವನದ ಪ್ರತಿರೂಪವಾಗಿ ಅರಳಿ ನಿಂತು ಅವರ ಬದುಕಿನೊಂದಿಗೆ ಒಂದಾಗಿ ಬೆರೆತುಕೊಂಡಿವೆ. ಇವು ಅಕ್ಷರ ಅರಿಯದ ಹಳ್ಳಿಗರ ಜನಸಮುದಾಯದ ಅಂತರಂಗದಲ್ಲಿ ಅರಳಿದ ಕುಸುಮಗಳು. ಈ ಮೂಲಕ ಅನಕ್ಷರಸ್ಥರ ಬದುಕಿನ ಸ್ತರಗಳನ್ನು ಕಂಡುಕೊಳ್ಳಬಹುದು.

ಜನಪದ ಕಲೆಗಳು ಮಾನವನಿಗೆ ಸಂತೋಷವನ್ನು ನೀಡುವುದರೊಂದಿಗೆ ಅವರಲ್ಲಿ ಭಕ್ತಿಯ ಭಾವ ಮೂಡಿಸಿವೆ. ಮನಸ್ಸಿನಲ್ಲಿರುವ ಭಯ ನಿವಾರಿಸುವಲ್ಲಿ, ನಿಸರ್ಗದಲ್ಲಿನ ಗಿಡ–ಮರ, ಸೂರ್ಯ–ಚಂದ್ರ, ನಕ್ಷತ್ರ, ನೆಲ–ಜಲ, ಬೆಂಕಿ–ಗಾಳಿ ಮುಂತಾದವುಗಳೊಂದಿಗೆ ದೈವತ್ವವನ್ನು ಕಂಡುಕೊಂಡಿದ್ದಾನೆ. ಅವುಗಳನ್ನು ಆರಾಧಿಸುವಾಗ ಸಂತೋಷದಿಂದ ಹಾಡಿ ಕುಣಿದು ಕುಪ್ಪಳಿಸಿ ತೃಪ್ತಿಪಡುವ ಮಾನವನ ಅಭಿಲಾಷೆಯೇ ಹಾಡು, ಕುಣಿತದ ಕಲೆಗೆ ಮೂಲವಾಗಿರಬಹುದು. ಈ ಹಿನ್ನೆಲೆಯಲ್ಲಿ ಹಬ್ಬ–ಹರಿದಿನ, ಹುಣ್ಣಿಮೆ–ಅಮವಾಸ್ಯೆಯ ಸಂದರ್ಭಗಳಲ್ಲಿ ದೈವಾರಾಧನೆಯ ಮೂಲಕ ಹಾಡು, ಕುಣಿತ ಮುಂತಾದ ಅನೇಕ ಜನಪದ ಕಲೆಗಳು ಸೃಷ್ಟಿಯಾಗಿರುವುದನ್ನು ಗುರುತಿಸಬಹುದಾಗಿದೆ. ಇಂಥ ಕಲೆಗಳ ಅಧ್ಯಯನವು ಆ ಬದುಕಿನ ಸಾಂಸ್ಕೃತಿಕ ಪರಿಸರವನ್ನು ಹೇಗೆ ಸೃಷ್ಟಿಸಿದೆ? ಎನ್ನುವುದು ಅಧ್ಯಯನದಲ್ಲಿ ಪ್ರಮುಖವಾಗುತ್ತದೆ.

ಜನಪದರ ಮಧ್ಯದಲ್ಲಿ ಹುಟ್ಟಿ ಬೆಳೆದು ಅವರ ಮನಸ್ಸಿಗೆ ಆನಂದ ನೀಡುವಂಥ ಜನಪದ ಕಲೆಗಳಲ್ಲಿ ಕೆಲವು ವ್ಯಷ್ಟಿಪ್ರಜ್ಞೆಯಿಂದಹಿಡಿದು, ಸಮಷ್ಟಿಪ್ರಜ್ಞೆಯವರೆಗೂ ಮೂಡಿ ಬಂದಿವೆ. ಹೀಗಾಗಿ ಇವು ಆರಾಧನೆ ಮತ್ತು ಮನೋರಂಜನೆಯ ನೆಪದಲ್ಲಿ ಬೆಳೆದು ಬಂದಂತಿವೆ. ಮನುಷ್ಯನ ಬದುಕು ಒಂದು ರೀತಿಯಲ್ಲಿ ಭಾರವಾದಾಗ ವೃತ್ತಿಕಲೆಗಳಾಗಿ ಪರಿಣಮಿಸಿ ಕಲಾವಿದರ ಉಪಜೀವನಕ್ಕೆ ದಾರಿಮಾಡಿಕೊಟ್ಟವು. ಜನಪದರ ಮನಸ್ಸಿಗೆ ಹರ್ಷ ನೀಡಿ ಬದುಕಿನಲ್ಲಿ ಉಲ್ಲಾಸ ಮೂಡಿಸಿ ತೃಪ್ತಿ ನೀಡುವ ಜನಪದ ಕಲೆಗಳು ಅವರ ಸಾಂಸ್ಕೃತಿಕ ಬದುಕಿನ ವಿಶೇಷತೆಗಳಾಗಿವೆ. ಅವರ ಮನದಾಳದಲ್ಲಿ ಸುಪ್ತವಾಗಿ ಅಡಗಿದ ಬಯಕೆಗಳು ಅಭಿವ್ಯಕ್ತಿಗಳಾಗಿ, ಅವು ಪ್ರಾಯೋಗಿಕ ಕಲೆಯಾಗಿ ಹೊರಬಂದು ಜನಪದ ಸಮೂಹದ ಮನಸ್ಸು ತನ್ನೆಡೆಗೆ ಸೆಳೆದವು. ಇಂಥ ಜನಪದ ಕಲೆಗಳು ಆಧುನಿಕರ ಗಮನ ತನ್ನೆಡೆಗೆ ಸೆಳೆದಿರುವುದರಿಂದ ಅವುಗಳ ಕುರಿತ ವ್ಯವಸ್ಥಿತವಾದ ಅಧ್ಯಯನದ ಅಗತ್ಯತೆ ಇಂದು ಹೆಚ್ಚಾಗಿದೆ.

ಪ್ರಸ್ತುತ ಅಧ್ಯಯನವು ಯಾರೂ ಗಮನಹರಿಸದೆ ನಿರ್ಲಕ್ಷಿತವಾದ ಅಧ್ಯಯನವೇನಲ್ಲ. ಇದುವರೆಗೆ ನಡೆದಿರುವ ಅಧ್ಯಯನಗಳಲ್ಲಿ ಸಂಗ್ರಹಣೆ, ಸಂಪಾದನೆ, ಗ್ರಂಥರಚನೆ, ಬಿಡಿಲೇಖನಗಳು ಮತ್ತು ಸಂಶೋಧನ ಪ್ರಬಂಧಗಳು ಬೀದರ ಜಿಲ್ಲೆಯ ಜನಪದ ಕಲೆಗಳ ಮೇಲೆ ಬೆಳಕು ಚೆಲ್ಲುವ ಕೆಲಸ ಮಾಡಿವೆ. "೧೯೭೨ ರಲ್ಲಿ ಭಾಲ್ಕಿ ತಾಲೂಕಿನ ಸಿದ್ಧಾಪುರವಾಡಿ ಗ್ರಾಮದ ಸಿದ್ಧೇಶ್ವರ ಬಳಗದವರು ಪ್ರಕಟಿಸಿದ ಶ್ರೀ ಕಲ್ಯಾಣರಾವ ದಾವಣಗಾವೆಯವರ ಕೃತಿ 'ಹೂ ಬೇಕೆ ಹೂ' ಎಂಬ ಹೆಸರಿನ ಜನಪದ ಗೀತೆಗಳ ಸಂಗ್ರಹವು ಬೀದರ ಜಿಲ್ಲೆಯ ಪ್ರಥಮ ಜನಪದ ಸಂಕಲನ ಎಂದು ಹೇಳಬಹುದು."* ಶ್ರೀ ಕ್ಯಾತನಹಳ್ಳಿ ರಾಮಣ್ಣನವರ 'ಬೀದರ

---

* ಬೀದರ ಜಿಲ್ಲೆಯ ಕೋಲಾಟ ಒಂದು ಅಧ್ಯಯನ ಡಾ, ಸೋಮನಾಥ ನುಚ್ಚಾ ಪುಟ. ೪೩

ಜಿಲ್ಲೆಯ ಜನಪದ ಗೀತೆಗಳು' ಮತ್ತು 'ಬೀದರ ಜಿಲ್ಲೆಯ ಜನಪದ ಕಥೆಗಳು' ಎಂಬ ಎರಡು ಕೃತಿಗಳನ್ನು ೧೯೭೬ರಲ್ಲಿ ಸಂಗ್ರಹಿಸಿದ್ದಾರೆ. ಡಾ. ಎಂ.ಎಸ್.ಲಠ್ಠೆ ಹಾಗೂ ಹೆಚ್. ಕಾಶಿನಾಥ ರೆಡ್ಡಿಯವರು ಸಿದ್ಧಪ್ರಭು ರಚಿಸಿದ 'ಭೂಕೈಲಾಸ' ಮತ್ತು 'ಚಂದ್ರಶಿರೋಮಣಿ' ಎಂಬ ಸಣ್ಣಾಟವನ್ನು ಹಾಗೂ 'ಶೀಲಪ್ಪ ಕವಿಯ ಬದುಕು ಬರಹ', ನಿಜಲಿಂಗ ಭದ್ರೇಶ್ವರರ 'ಅನುಭವ ಪದಗಳು', 'ಮರಕುಂದಿ ಬಸವಣ್ಣಪ್ಪನ ಭಜನೆಗಳು'. ಎಚ್. ಕಾಶಿನಾಥ ರೆಡ್ಡಿ ಅವರ 'ಕುಕ್ಕೆನ ಹೂ' ಮುಂತಾದ ಕೃತಿಗಳನ್ನು ಸಂಗ್ರಹಿಸಿದ್ದಾರೆ. ಬೀದರ 'ಜಿಲ್ಲೆಯ ಬುಲಾಯಿ ಹಾಡುಗಳು', 'ಬೀದರ ಜಿಲ್ಲೆಯ ಜನಪದ ಗೀತೆಗಳು', 'ಶಿಖರಗನ್ನಡಿ', 'ಲೋಕಸಿರಿ', 'ಧರಿಜಾನಪದ' ಮುಂತಾದ ಕೃತಿಗಳನ್ನು ಡಾ. ಜಗನ್ನಾಥ ಹೆಬ್ಬಾಳೆ ಅವರು ಪ್ರಕಟಿಸಿದ್ದಾರೆ. ಡಾ.ಡಿ.ಬಿ ನಾಯಕ ಅವರು 'ಬುಲಾಯಿ ಹಾಡುಗಳು', ಡಾ. ರಾಜೇಂದ್ರ ಯರನಾಳೆ 'ಶೀಗಿ ಹಾಡುಗಳು', 'ಬಿದ್ರಿಕಲೆ', 'ಹಚ್ಚೆಕಲೆ', ಮ.ಮಾ.ಬೋರಾಳಕರ್ 'ಬೀದರ ಜಿಲ್ಲೆಯ ಆಣೀ ಪೀಣಿ ಹಾಡುಗಳು', ವಿರೂಪಾಕ್ಷಯ್ಯ ಗೋರ್ಟಾ 'ಬುಲಾಯಿ ಹಾಡುಗಳು', ಹೆಚ್.ಸಿ. ಖಡ್ಕೆ 'ಬೀದರ ಬೆಳಕು', ಚಂದ್ರಪ್ಪ ಹೆಬ್ಬಾಳಕರ್ ಹಾಗೂ ಮರಿಯಪ್ಪ ಹೊಸಮನಿ 'ಬೀದರ ಜಿಲ್ಲೆ ಮೊಹರಂ ಪದಗಳು', ದೇಶಾಂಶ ಹುಡುಗಿ ಚಂದ್ರಪ್ಪ ಹೆಬ್ಬಾಳಕರ 'ಜಾನಪದ ಸೊಗಡು', ದೇಶಾಂಶ ಹುಡುಗಿ 'ಬೀದರ ಜಿಲ್ಲಾ ತತ್ವಪದಕಾರರು', ಪ್ರೊ ವೀರೇಂದ್ರ ಸಿಂಪಿ ಹಾಗೂ ಪಂಚಾಕ್ಷರಿ ಪುಣ್ಯಶೆಟ್ಟಿ 'ಬೀದರ ಜಿಲ್ಲಾ ದರ್ಶನ' ಮುಂತಾದವುಗಳನ್ನು ಸಂಗ್ರಹಿಸಿದ್ದಾರೆ. ಡಾ. ಸೋಮನಾಥ ಯಾಳವಾರ, ಡಾ. ಪ್ರೇಮಾ ಸಿರ್ಸೆ 'ಬೀದರ ಜಿಲ್ಲಾ ದರ್ಶನ' ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾದ ಮೂಲಕ ಸಂಪಾದಿಸಿದ್ದಾರೆ. ಡಾ. ಹೇಮಲತಾ ವಡ್ಡೆ 'ಬೀದರ ಜಿಲ್ಲೆಯ ಹಬ್ಬ ಹರಿದಿನಗಳು'. ಡಾ. ಸೋಮನಾಥ ಯಾಳವಾರ, ಡಾ. ಕಾವ್ಯಶ್ರೀ ಪ್ರದೀಪ ಕೊಟ್ಟಗಿಯವರು 'ವೈದ್ಯಜಾನಪದ', ದೇಶಾಂಶ ಹುಡುಗಿ, 'ಬೀದರ ಕನ್ನಡ ಕೋಶ' ಡಾ. ಬಸವರಾಜ ಸಬರದ 'ಬೀದರ ಜಿಲ್ಲೆಯ ಅನುಭಾವಿ ಕವಿಗಳು', ಎಸ್.ಎಂ. ಜನವಾಡಕರ 'ಬೀದರ ಜಿಲ್ಲೆಯ ಜನಪದ ಸಿರಿ', ಡಾ.ಸಂಗಮೇಶ ಸವದತ್ತಿಮಠ 'ಸಿರಗಾಪೂರ ನಾಗೇಂದ್ರಪ್ಪ ಕವಿಯ ಭಜನೆ ಹಾಡುಗಳು', ಡಾ. ನೀಲಾಂಬಿಕಾ ಪೋಲಿಸ ಪಾಟೀಲ 'ಕಾಡಾದಿ ಅವ್ವನ ಹಾಡುಗಳು', ಶಿರೋಮಣಿ ತಾರೆ, 'ಬೀದರ ಜಿಲ್ಲೆಯ ಜನಪದ ಗಾದೆಗಳು', ಮುಂತಾದ ಗ್ರಂಥಗಳನ್ನು ಹೊರತಂದಿದ್ದಾರೆ. ಇವುಗಳಲ್ಲದೆ ಡಾ. ಡಿ. ಬಿ. ನಾಯಕ ಅವರ ದೇಶಿ ಸಂಸ್ಕೃತಿಯಲ್ಲಿಯ ಬೀದರ. ಜಿಲ್ಲೆಯ ಜನಪದ ಕಲೆಗಳು, ಡಾ. ಜಗನ್ನಾಥ ಹೆಬ್ಬಾಳೆಯವರ ಬೀದರ ಜಿಲ್ಲೆಯ ವೃತ್ತಿ ಕಲಾವಿದರು. ಡಾ. ಸೋಮನಾಥ ಯಾಳವಾರ ಅವರ ಬೀದರ ಜಿಲ್ಲೆಯ ಜನಪದ ಕಲಾವಿದರು, ಈ ಮುಂತಾದವು ಜನಪದ ಕಲೆಗಳ ಕುರಿತ ಬಿಡಿಲೇಖನಗಳಾಗಿವೆ. ಜಿಲ್ಲೆಯ ಕುರಿತ ಸಂಶೋಧನಾ ಪ್ರಬಂಧಗಳು ಹೀಗಿವೆ. ಡಾ. ಸೋಮನಾಥ ನುಚ್ಚಾ 'ಬೀದರ ಜಿಲ್ಲೆಯ ಕೋಲಾಟ ಒಂದು ಅಧ್ಯಯನ' (೧೯೯೧)ಡಾ. ಗುರುಲಿಂಗಪ್ಪ ಧಬಾಲೆ 'ಬೀದರ ಜಿಲ್ಲೆಯ ಅನುಭಾವಿ ಕವಿಗಳು' (೨೦೦೬) ಡಾ. ಅರುಣಾ ಎಸ್. ಸುಲ್ತಾನಪುರೆ 'ಬುಲಾಯಿ ಹಾಡುಗಳ ಸಾಂಸ್ಕೃತಿಕ ಅಧ್ಯಯನ' (೨೦೦೯) ಸಿ. ಕೊಟ್ರಪ್ಪ 'ಬೀದರ ಜಿಲ್ಲೆಯ ಕಥನಗೀತೆಗಳು ಒಂದು ಅಧ್ಯಯನ' (೨೦೧೦) ಐಶ್ವರಿ ಎಸ್. ಶಂಭುಶಂಕರ 'ಬೀದರ ಜಿಲ್ಲೆಯ ದಲಿತ ತತ್ವಪದಕಾರರು' (೨೦೦೨) ಮುಂತಾದವು.

ಹೈದ್ರಾಬಾದ ಕರ್ನಾಟಕದ ವ್ಯಾಪ್ತಿಯಲ್ಲಿ ಬೀದರ ಒಳಗೊಳ್ಳುವುದರಿಂದ ಆ ಶೀರ್ಷಿಕೆ ಅಡಿಯಲ್ಲಿ ಸಂಶೋಧನಾ ಪ್ರಬಂಧಗಳು ಹೀಗಿವೆ. ಡಾ. ಎಚ್. ಟಿ. ಪೋತೆ ಅವರ 'ಹೈದ್ರಾಬಾದ ಕರ್ನಾಟಕ ಜನಪದ ಪ್ರದರ್ಶನ ಕಲೆಗಳು' (೧೯೯೪) ಡಾ. ಯಂಕಪ್ಪ ನಾಟಿಕಾರ 'ಹೈದ್ರಾಬಾದ ಕರ್ನಾಟಕದ ಹಂತಿ ಪದಗಳು'. (೨೦೦೫) ಡಾ. ವೆಂಕಟ ಜಾಧವ 'ಹೈದ್ರಾಬಾದ ಕರ್ನಾಟಕ ಜನಪದ ಕುಣಿತಗಳ ಸಾಂಸ್ಕೃತಿಕ ಅಧ್ಯಯನ' (೨೦೧೧) ಬೀದರ ಜಿಲ್ಲೆಗೆ ಸಂಬಂಧಿಸಿದ (ಎಂ.ಫಿಲ್) ಕಿರು ಸಂಶೋಧನಾ ಪ್ರಬಂಧಗಳು ಮೂಡಿ ಬಂದಿವೆ. ಡಾ. ಎಚ್. ಟಿ. ಪೋತೆ ಅವರ 'ಹೈದ್ರಬಾದ ಕರ್ನಾಟಕದ ಜನಪದ ವಾದ್ಯಗಳು' (೧೯೮೯), ಜಗನ್ನಾಥ ಕಮಲಾಪೂರೆ 'ಬುಲಾಯಿ ಹಾಡುಗಳ ಒಂದು ಅಧ್ಯಯನ' (೨೦೦೧), ಶಿವಾಜಿ ಜೆ ಕಾಂಬಳೆ, 'ಬೀದರ

ಜಿಲ್ಲೆಯ ಭೂತೇರು ಒಂದು ಅಧ್ಯಯನ' (೧೯೫೫-೯೬) ಡಾ. ಜಗನ್ನಾಥ ಹೆಬ್ಬಾಳೆ 'ಬೀದರ ಜಿಲ್ಲೆಯ ಜನಪದ ಗೀತೆಗಳು ಸಾಂಸ್ಕೃತಿಕ ಅಧ್ಯಯನ', ಡಾ. ಟಿ. ಎಂ. ಭಾಸ್ಕರ 'ಬೀದರ ಜಿಲ್ಲೆಯ ದಲಿತ ಸಂಪ್ರದಾಯಗಳು', ಶ್ರೀಮತಿ ಜಯದೇವಿ ತೇಲಿ 'ಬೀದರ ಜಿಲ್ಲೆಯ ಮದುವೆ ಪದ್ಧತಿಗಳ ಒಂದು ಅಧ್ಯಯನ' (೨೦೦೧) ಡಾ. ಮಹಾದೇವಿ ಹೆಬ್ಬಾಳೆ, 'ಬೀದರ ಜಿಲ್ಲೆಯ ದೇವರು ಮತ್ತು ಉತ್ಸವಗಳು', ಸಾವಿತ್ರಿ, 'ಬೀದರ ಜಿಲ್ಲೆಯ ಸಂಪ್ರದಾಯದ ಹಾಡುಗಳು', ಪಂಕಜಾ ಶಿವರಾಜ 'ಬೀದರ ಜಿಲ್ಲೆಯ ಜನಪದ ಕಲೆಗಳು' ಈ ಮುಂತಾದವು ಅಧ್ಯಯನದ ಅಗತ್ಯತೆಯನ್ನು ಸೂಚಿಸುವಂತಿವೆ. ಈ ಎಲ್ಲ ಕೃತಿ, ಲೇಖನಗಳನ್ನು ಗಮನದಲ್ಲಿರಿಸಿಕೊಂಡು ಅವುಗಳಲ್ಲಿ ಕೆಲವನ್ನು ಆಕರಗಳನ್ನಾಗಿಟ್ಟುಕೊಂಡು ಈ ಕೆಳಗಿನಂತೆ ಅಧ್ಯಯನ ಕೈಕೊಳ್ಳಲಾಗಿದೆ.

ಬೀದರ ಜಿಲ್ಲೆಯ ಜನಪದ ಕಲೆಗಳು ಎಂಬ ವಿಷಯದ ಸಂಶೋಧನಾ ಅಧ್ಯಯನವನ್ನು ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ ಹಾಗೂ ಸಮಾರೋಪವನ್ನು ಹೊರತು ಪಡಿಸಿ ಐದು ಅಧ್ಯಾಯಗಳಾಗಿ ವಿಂಗಡಿಸಿಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ.

೧. ಬೀದರ ಜಿಲ್ಲೆಯ ಇತಿಹಾಸ ಹಾಗೂ ಜನಪದ ಕಲೆಗಳ ಪರಂಪರೆ
೨. ಜನಪದ ಕಲೆಗಳ ಆಶಯ ಮತ್ತು ಅಭಿವ್ಯಕ್ತಿ
೩. ಬೀದರ ಜಿಲ್ಲೆಯ ಜನಪದ ಕಲೆಗಳು
೪. ಜನಪದ ಕಲೆ ಮತ್ತು ಮಹಿಳೆ
೫. ಜನಪದ ಕಲೆಗಳು ಮತ್ತು ಸಾಂಸ್ಕೃತಿಕ ಸಂಬಂಧ

**೧. ಬೀದರ ಜಿಲ್ಲೆಯ ಇತಿಹಾಸ ಹಾಗೂ ಜನಪದ ಕಲೆಗಳ ಪರಂಪರೆ**

ಮೊದಲನೆಯ ಅಧ್ಯಾಯದಲ್ಲಿ ಬೀದರ ಜಿಲ್ಲೆಯ ಐತಿಹಾಸಿಕ, ಸಾಂಸ್ಕೃತಿಕ, ಸಾಹಿತ್ಯಿಕ ಹಾಗೂ ಕಲಾತ್ಮಕ ಪರಂಪರೆಯು ಹೊಂದಿರುವ ಬಗೆಯನ್ನು ಗುರುತಿಸಲಾಗಿದೆ. ಕನ್ನಡ ನಾಡಿನ ಚರಿತ್ರೆಯಲ್ಲಿ ಬೀದರ ಜಿಲ್ಲೆಯು ತನ್ನದೇ ಆದ ವೈಶಿಷ್ಟ್ಯತೆ ಹೊಂದಿದೆ. ಅನೇಕ ಆಳರಸರ ಅಧೀನಕ್ಕೆ ಒಳಪಟ್ಟು ಪರಭಾಷೆ, ಪರಸಂಸ್ಕೃತಿಯ ಒತ್ತಡಕ್ಕೆ ಸಿಲುಕಿ ತನ್ನತನವನ್ನು ಉಳಿಸಿಕೊಂಡಿದೆ. ೧೨ನೇ ಶತಮಾನದ ಬಸವಣ್ಣನವರ ನೇತೃತ್ವದಲ್ಲಿ ಮದ್ದಳೆ ನುಡಿಸುವ ಅಲ್ಲಮ ಪ್ರಭು, ಕಿನ್ನರಿ ಬ್ರಹ್ಮಯ್ಯ, ಬಹುರೂಪಿ ಚೌಡಯ್ಯ, ಢಕ್ಕೆಯ ಮಾರಯ್ಯ, ಕಲಕೇತ ಬೊಮ್ಮಯ್ಯ, ಕಂಕರಿ ಕಕ್ಕಯ್ಯ, ಮುಂತಾದ ಶಿವಶರಣರು ತಮ್ಮ ಕಲಾವಂತಿಕೆಯನ್ನು ಮೆರೆದಿರುವರು. ಜನಪದ ಕಲೆಗಳನ್ನು ಶ್ರದ್ಧೆಯಿಂದ ಪ್ರದರ್ಶಿಸುವ ಶಿವಶರಣರು ಅವುಗಳನ್ನೇ ತಮ್ಮ ಕಾಯಕವನ್ನಾಗಿ ಮಾಡಿಕೊಂಡು ಅವುಗಳಿಗೆ ಮರುಜೀವ ನೀಡಿದರು.

ಜಿಲ್ಲೆಯು ಆಂಧ್ರ ಹಾಗೂ ಮಹಾರಾಷ್ಟ್ರದ ಗಡಿ ಸೀಮೆ ಹೊಂದಿರುವುದರಿಂದ ಕನ್ನಡದ ಜೊತೆಗೆ ಮರಾಠಿ, ತೆಲುಗು, ಉರ್ದು, ಹಿಂದಿ ಮುಂತಾದ ಭಾಷೆಗಳ ಪ್ರಭಾವಕ್ಕೆ ಇಲ್ಲಿನ ಜನ ಒಳಗಾಗಿದ್ದಾರೆ. ಹೀಗಾಗಿ ಇಲ್ಲಿನ ಜನಪದ ಕಲೆಗಳು ತನ್ನದೇ ಆದ ಮಹತ್ವನ್ನು ಹೊಂದಿವೆ. ಇಲ್ಲಿನ ಭಜನೆ ಮೇಳ, ಗೊಂದಲಿಗರು ಬುಡಬುಡುಕಿ, ಡೊಳ್ಳು, ಭೂತೇರು, ಬುಲಾಯಿ, ಶೀಗಿ, ಪೈತ್ರಿ ಕಲೆ ಇಂದಿಗೂ ಗಮನಾರ್ಹವಾಗಿ ಕಂಡುಬರುತ್ತವೆ. ಜಿಲ್ಲೆಯು ಶಿಲ್ಪ ಕಲೆಯ ತವರಾಗಿದ್ದು ಅಪಾರವಾದ ಜನಪದ ಕಲೆಗಳನ್ನು ತನ್ನೊಡಲಲ್ಲಿ ಹುದುಗಿಸಿಕೊಂಡಿದೆ. ಅವುಗಳಲ್ಲಿ ಕಂಡು ಬರುವ ವಾದ್ಯ ಪರಿಕರಗಳು, ವಸ್ತ್ರಾಭರಣಗಳು, ಕೇಶಾಲಂಕಾರ ಮುಂತಾದವು ಆಕರ್ಷಕವಾಗಿವೆ. ಈ ಮುಂತಾದವನ್ನು ಕುರಿತು ಅಧ್ಯಯನ ಕೈಗೊಳ್ಳಲು ಪ್ರಯತ್ನಿಸಲಾಗಿದೆ.

**೨. ಜನಪದ ಕಲೆಗಳ ಆಶಯ ಮತ್ತು ಅಭಿವ್ಯಕ್ತಿ**

ಜನಪದ ಕಲೆಗಳ ಆಶಯ ಮತ್ತು ಅಭಿವ್ಯಕ್ತಿ ಎಂಬ ಅಧ್ಯಾಯದಲ್ಲಿ ಪ್ರತಿಯೊಂದು ಜನಪದ ಕಲೆಗಳು ಒಂದೊಂದು ಆಶಯವನ್ನು ಹೊಂದಿರುತ್ತವೆ, ಆಶಯಗಳಿಂದಲೇ ಜನಪದ ಕಲೆಗಳು ಜನರ ಮಧ್ಯೆ ಬದುಕುಳಿದಿವೆ. ಮಾನವನ ನೆಮ್ಮದಿಯ ಬದುಕಿಗೆ ಜನಪದ ಕಲೆಗಳು ಬೇಕು. ಯಾವ ಅಕ್ಷರ ಕಲಿಯದ ಜನಪದರು ತಮ್ಮ ಪ್ರತಿಭಾ ಸಾಮರ್ಥ್ಯದಿಂದ ಬದುಕನ್ನು ಕಲೆಯಾಗಿಸಿದ್ದಾರೆ. ಅವರ ಅನುಭವದಾಳದಿಂದ ಮೂಡಿ ಬಂದ ಕಲೆಗಳು ವಾಸ್ತವತೆಯ ಪ್ರತಿಬಿಂಬವಾಗಿವೆ. ತಾನು ಕೇಳಿದ್ದನ್ನು, ನೋಡಿದ್ದನ್ನು, ಮಾಡಿದ್ದನ್ನು, ಅನುಭವಿಸಿದ್ದನ್ನು ಕಲೆಯಾಗಿ ಅಭಿವ್ಯಕ್ತಿಸುವ ಸಾಮರ್ಥ್ಯ ಹೊಂದಿದ್ದರು. ಈ ಹಿನ್ನೆಲೆಯಲ್ಲಿ ಜನಪದ ಕಲೆಗಳ ಆಶಯ ಮತ್ತು ಅಭಿವ್ಯಕ್ತಿಯನ್ನು ಕಂಡುಕೊಳ್ಳಲಾಗಿದೆ.

**೩. ಬೀದರ ಜಿಲ್ಲೆಯ ಜನಪದ ಕಲೆಗಳು**

ಈ ಅಧ್ಯಾಯದಲ್ಲಿ ಜಿಲ್ಲೆಯಲ್ಲಿ ಕಂಡುಬರುವಂಥ ಜನಪದ ಕಲೆಗಳನ್ನು ಎಂಟು ಉಪಭಾಗಗಳಾಗಿ ವಿಂಗಡಿಸಿಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಮೊದಲನೆ ಉಪಭಾಗದಲ್ಲಿ **ಆರಾಧನಾ ಸಂಬಂಧಿ ಕಲೆಗಳು,** ಇದರಲ್ಲಿ ಬುಲಾಯಿ, ಜೋಕುಮಾರ, ಶೀಗಿ, ಗೌರೆಕುಳ್ಳಿ, ನಂದಿಕೋಲು, ಪುರವಂತಿಕೆ, ಬುರ್ ಬುರ್ ಪೋಚಮ್ಮ (ದುರಗಿ ಮುರಗಿ) ದುಮ್ಮಾಲಿ ಮೇಳ, ಡೊಳ್ಳು ಕುಣಿತ ಕುರಿತು ವಿವರಿಸಲಾಗಿದೆ. **ಗೀತ ಸಂಬಂಧಿ ಕಲೆಗಳಲ್ಲಿ** ಹಂತಿ, ಭಜನೆ, ಲಾವಣಿ, ಗೀಗೀ ಆಣೀ ಪೀಣೀ ಹಾಡುಗಳು, ಪೈತ್ರಿ ಹಾಡುಗಳು, ಡೊಳ್ಳಿನ ಹಾಡುಗಳು, ಹಾಡುಗಾರಿಕೆ ಬಗ್ಗೆ ಅಧ್ಯಯನಕ್ಕೆ ಒಳಪಡಿಸಲಾಗಿದೆ. **ಜನಾಂಗ ಸಂಬಂಧಿ ಕಲೆಗಳಲ್ಲಿ** ಲಂಬಾಣಿ ಕುಣಿತ, ರಾಜಗೊಂಡ ಕುಣಿತ, ಪೈತ್ರಿ ಕುಣಿತ, ಬುಡಬುಡಕಿ, ಬಾಳಸಂತರು, ದೊಂಬರು, ಪೋತರಾಜ, ಭೂತೇರು, ಗೊಂದಳ, ಸುಡುಗಾಡು ಸಿದ್ಧರು ಈ ಮುಂತಾದ ಜನಪದ ಕಲೆಗಳ ಕುರಿತು ವಿವರವಾಗಿ ಚರ್ಚಿಸಲಾಗಿದೆ. **ಪ್ರದರ್ಶನ ಸಂಬಂಧಿ ಕಲೆಗಳಲ್ಲಿ** ದೊಡ್ಡಾಟ, ಸಣ್ಣಾಟ, ಕೋಲಾಟ, ಬಹುರೂಪಿ ಕಲೆಗಳು ಕುರಿತು ವಿವರವಾಗಿ ಅಧ್ಯಯನವನ್ನು ಕೈಗೊಳ್ಳಲಾಗಿದೆ. **ಅಲಂಕಾರ ಸಂಬಂಧಿ ಕಲೆಗಳಿಗೆ** ಸಂಬಂಧಿಸಿದ ರಂಗೋಲಿ, ಹಚ್ಚೆ, ಮೆಹೆಂದಿ, ಕೇಶಾಲಂಕಾರ, ವಸ್ತ್ರಾಭರಣಗಳು, ಕಸೂತಿ ಕುರಿತು ವಿವರಿಸಲಾಗಿದೆ. **ಕರಕುಶಲ ಸಂಬಂಧಿ ಕಲೆಗಳಲ್ಲಿ** ಬಿದ್ರಿ, ಕೌದಿ, ಬುಟ್ಟಿ ಹೆಣಿಕೆ, ಕೃಷಿ ಸಂಬಂಧಿತ ಜನಪದ ಕಲೆಗಳ ಅಧ್ಯಯನವನ್ನು ಮಾಡಲಾಗಿದೆ. **ಪ್ರಾಣಿ ಸಂಬಂಧಿ ಕಲೆಗಳಾದ** ಹಾವಾಡಿಗರು, ಕೋತಿಕುಣಿತ ಅಧ್ಯಯನ, **ಸಂಪ್ರದಾಯ ಸಂಬಂಧಿ ಕಲೆಗಳಲ್ಲಿ** ಧಾರ್ಮಿಕ ಸಂಪ್ರದಾಯಗಳು, ಮದುವೆ ಸಂಪ್ರದಾಯಗಳು, ಸಾಮಾಜಿಕ ಸಂಪ್ರದಾಯಗಳು, ಅಡುಗೆ ಸಂಪ್ರದಾಯಗಳು ಅಧ್ಯಯನ ಕೈಗೊಂಡು ವಿಶ್ಲೇಷಿಸಲಾಗಿದೆ.

**೪. ಜನಪದ ಕಲೆ ಮತ್ತು ಮಹಿಳೆ**

ಈ ಅಧ್ಯಾಯದಲ್ಲಿ ಮಹಿಳೆಯರು ಬೆಳಿಗ್ಗೆ ಹೊಸ್ತಿಲ ಮುಂದೆ ರಂಗೋಲಿ ಹಾಕುವುದರಿಂದ ಹಿಡಿದು ಬಿಡುವಿನ ವೇಳೆಯಲ್ಲಿ ತಾನು ತೊಡಗಿಸಿಕೊಳ್ಳುವ ಕೆಲಸ ಕಾರ್ಯದಲ್ಲಿಯೂ ಜನಪದ ಮಹಿಳಾ ಕಲೆಗಳು ಕಂಡುಬರುತ್ತವೆ. ಮಹಿಳೆ ಮನೆಯ ಅಲಂಕಾರಕ್ಕಾಗಿ, ತನ್ನ ಹವ್ಯಾಸಕ್ಕಾಗಿ ಮಾಡುವ ಹೆಣಿಕೆ, ಹೊಲಿಗೆ, ಧಾರ್ಮಿಕ ಪೂಜೆ, ವ್ರತ ಮುಂತಾದವುಗಳಲ್ಲಿ ಮಹಿಳಾ ಕಲೆ ಎದ್ದು ತೋರುತ್ತದೆ. ಉಡಲು ಚಿಕ್ಕದಾಗುವ, ಉಟ್ಟುಕೊಂಡು ಬೇಸರಾದ, ಹರಿದ ಹಳೆ ಬಟ್ಟೆಗಳನ್ನು ಬಳಸಿಕೊಂಡು ಕೌದಿ ಹೊಲಿಯುವುದು, ಮಕ್ಕಳಿಗೆ ಹಾಸಲು, ಹೊದಿಸಲು ದುಪ್ಪಟಾ, ಲಂಗೋಟಿ, ಕುಂಚಿ ಮುಂತಾದವನ್ನು ಹೊಲೆಯುವುದು. ತೊಟ್ಟಿಲ ಮೇಲೆ ಕಟ್ಟುವ ಅಂದವಾದ ಗುಬ್ಬಿಗಳಿರುವ ಖೇಳನಿ, ಮಾಡುವುದು, ಹೊಸಬಟ್ಟೆಯನ್ನು ಬಳಸಿಕೊಂಡು ಮಕ್ಕಳಿಗೆ ಕಟ್ಟಲು ಕುಂಚಿ ಕುಲಾಯಿ, ಕುಬ್ಬಸ, ಸರಚೀಲು, ಎಲೆಚೀಲ ಹೊಲೆಯುವರು. ದಾರ, ಉಲನ, ಸುತ್ತಲಿದಾರ, ವಾಯರ, ಗಾಜಿನ ನಳಿಕೆ, ಗಾಜಿನ ಸೀಸೆ, ನಾಣ್ಯ, ಬಣ್ಣದ ಮಣಿ ಬಳಸಿಕೊಂಡು, ದಸ್ತಿ, ಬಾಗಿಲುಪರದೆ, ಬ್ಯಾಗು, ಸ್ವೆಟರ ಪರ್ಸ್, ಲೇಟರ ಬ್ಯಾಗ ಮುಂತಾದವುಗಳನ್ನು ಹೆಣಿಯುವುದನ್ನು ಇಲ್ಲಿ

ಗುರುತಿಸಲಾಗಿದೆ. ಮಣ್ಣೆತ್ತಿನ ಅಮವಾಸ್ಯೆಯಂದು ಮಣ್ಣಿನಿಂದ ಎತ್ತುಗಳು, ಆಕಳು, ಕರು, ನೀರು ಕುಡಿಯುವ ದೋಣಿ, ಭಾದ್ರಪದ ಚೌತಿಯಂದು ಗಣಪತಿ ಹಾಗೂ ಎರಡು ಎತ್ತುಗಳು ಮತ್ತು ಒಂದು ಇಲಿ ಮಾಡುತ್ತಾರೆ. ಜೋಕುಮಾರ ಹುಣ್ಣಿಮೆಯ ಸಂದರ್ಭದಲ್ಲಿ ಜೋಕುಮಾರನ ಮೂರ್ತಿ ತಯಾರಿಸಿ ಪೂಜೆ ಮಾಡುವಲ್ಲಿ ಮಹಿಳಾ ಜನಪದ ಕಲೆಗಳು ಕಂಡುಬರುತ್ತವೆ. ಈ ಅಧ್ಯಾಯದಲ್ಲಿ ಅವುಗಳನ್ನು ಗುರುತಿಸುವ ಕಾರ್ಯ ಮಾಡಲಾಗಿದೆ.

**೫. ಜನಪದ ಕಲೆಗಳು ಮತ್ತು ಸಾಂಸ್ಕೃತಿಕ ಸಂಬಂಧ**

ಈ ಅಧ್ಯಾಯದಲ್ಲಿ ಹಳ್ಳಿಗರ ಬದುಕು ಸಂಸ್ಕೃತಿಯ ಜೀವನದಿಯಂತೆ ಚಲನ ಶೀಲವಾಗಿದೆ. ಆಯಾ ಪ್ರಾಂತ್ಯದ ವಿಶಿಷ್ಟತೆಯನ್ನು ಮೈಗೂಡಿಸಿಕೊಂಡ ಜನಪದ ಕಲೆಗಳು ಈ ಭಾಗದ ಸಾಂಸ್ಕೃತಿಕ ಸತ್ತ್ವ ಶಕ್ತಿಯನ್ನು ತಿಳಿಸಿಕೊಡುತ್ತವೆ. ಜನಪದರ ಬದುಕಿನೊಂದಿಗೆ ಪರಂಪರಾಗತವಾಗಿ ಬೆಳೆದು ಬಂದಿರುವ ಜನಪದ ಕಲೆಗಳಲ್ಲಿರುವ ಸಂಸ್ಕೃತಿ ಮತ್ತು ಅವುಗಳ ಸಂಬಂಧ ಕುರಿತು ಅಧ್ಯಯನ ಮಾಡಲಾಗಿದೆ.

ಈ ಪ್ರಬಂಧದ ಪ್ರತಿ ಅಧ್ಯಾಯದಲ್ಲಿ ಪ್ರತಿಪಾದಿಸಲಾಗುವ ವಿಷಯಗಳು ಮತ್ತು ಅಲ್ಲಿ ಕಂಡುಬರುವ, ವಿಶಿಷ್ಟ ಅಂಶಗಳನ್ನು ಕುರಿತು ಅಧ್ಯಯನದ ಸಮಾರೋಪದಲ್ಲಿ ಗುರುತಿಸಲಾಗಿದೆ.

ಇಂದಿನ ಆಧುನಿಕ ಕೆಲಸಕಾರ್ಯದ ಒತ್ತಡದಲ್ಲಿ ಹಾಗೂ ಸಮೂಹಮಾಧ್ಯಮದ ಪ್ರಭಾವದಿಂದ ಜನಪದ ಕಲೆಗಳು ಮರೆಯಾಗುತ್ತಲಿವೆ. ಕಾಯಕದೊಂದಿಗೆ ಮೂಡಿ ಬಂದ ಕಲೆಗಳು ಯಂತ್ರ ಸಂಸ್ಕೃತಿಯಿಂದ ಪೂರ್ತಿ ಅಳಿಯುತ್ತಿವೆ. ಹೀಗಾಗಿ ಇಂಥ ಅಮೂಲ್ಯ ಜನಪದರ ಆಸ್ತಿಯಾದ ಜನಪದ ಕಲೆಗಳನ್ನು ಉಳಿಸಬೇಕು ಮುಂದಿನ ಜನಾಂಗಕ್ಕೆ ಪರಿಚಯಿಸಬೇಕೆಂದರೆ ದಾಖಲೀಕರಣದಿಂದ ಮಾತ್ರ ಸಾಧ್ಯ ಎಂಬ ಈ ನಂಬಿಕೆಯ ಹಿನ್ನೆಲೆಯಲ್ಲಿ ದೊರಕಬಹುದಾದ ಇಲ್ಲಿಯ ಕಲೆಗಳನ್ನು ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ.

# ಅಧ್ಯಾಯ-೧

# ಬೀದರ ಜಿಲ್ಲೆಯ ಇತಿಹಾಸ ಹಾಗೂ ಜನಪದ ಕಲೆಗಳ ಪರಂಪರೆ

ಕರ್ನಾಟಕ ರಾಜ್ಯದ ಉತ್ತರದ ತುದಿಯಲ್ಲಿರುವ ಬೀದರ ಜಿಲ್ಲೆ ಭಾರತದ ದಖನ್ನಿನ ಮಧ್ಯ ಭಾಗದಲ್ಲಿರುವ ಚಿಕ್ಕ ಜಿಲ್ಲೆ. ಇದು ಬೀದರ, ಭಾಲ್ಕಿ, ಹುಮನಾಬಾದ, ಬಸವಕಲ್ಯಾಣ ಮತ್ತು ಔರಾದ ಎಂಬ ಐದು ತಾಲ್ಲೂಕುಗಳನ್ನೊಳಗೊಂಡಿದೆ. ಒಟ್ಟು ೫೯೮ ಗ್ರಾಮಗಳನ್ನು ಹೊಂದಿದೆ. ಭೌಗೋಳಿಕ ವ್ಯಾಪ್ತಿ ಕಡಿಮೆಯಿದ್ದರೂ ಐತಿಹಾಸಿಕ, ಸಾಂಸ್ಕೃತಿಕ. ಭಾಷಿಕ, ಸಾಹಿತ್ಯಿಕ, ಕಲಾತ್ಮಕ ಹಿರಿಮೆಯನ್ನು ಹೊಂದಿದೆ. ಎರಡುವರೆ ಸಾವಿರ ವರ್ಷಗಳಷ್ಟು ಐತಿಹಾಸಿಕ ಹಿನ್ನೆಲೆ ಹೊಂದಿದ ಈ ಜಿಲ್ಲೆ ವಿವಿಧ ಜನಾಂಗ, ಧರ್ಮ, ಭಾಷೆಗಳ ಸಾಂಸ್ಕೃತಿಕ ಸಂಗಮವಾಗಿದ್ದು, ಮೈತ್ರಿ ಬಾಂಧವ್ಯಕ್ಕೆ ಹೆಸರಾಗಿದೆ. ಇಲ್ಲಿನ ನೆಲ, ಜಲ, ಭಾಷೆ, ಹಬ್ಬ ಉತ್ಸವ, ಆಚರಣೆ ವಿಶೇಷವಾದ ಸಂಸ್ಕೃತಿಯನ್ನು ಬಿಂಬಿಸುವುದನ್ನು ಕಾಣಬಹುದು. ಶರಣ ಹಾಗೂ ಸಂತರ ಅಮರವಾಣಿ ಅನುಭಾವಿಗಳ ಅನುಭವ ವಾಣಿಯಿಂದ ಈ ನೆಲದಲ್ಲಿ ಹುಟ್ಟಿ ಬಂದ ಸಾಹಿತ್ಯ, ಕಲೆ, ಧರ್ಮ ಅಪರೂಪವಾದವು. ಈ ಜಿಲ್ಲೆಯು ಪೂರ್ವಕ್ಕೆ ಆಂಧ್ರಪ್ರದೇಶ ನಿಜಾಮಬಾದ ಹಾಗೂ ಮೇದಕ ಜಿಲ್ಲೆ ಹೊಂದಿದೆ. ಉತ್ತರ ಪಶ್ಚಿಮಕ್ಕೆ ಮಹಾರಾಷ್ಟ್ರದ ನಾಂದೇಡ ಮತ್ತು ಉಸ್ಮಾನಾಬಾದ ಜಿಲ್ಲೆಗಳಿದ್ದು ದಕ್ಷಿಣದಲ್ಲಿ ಗುಲಬರ್ಗಾ ಜಿಲ್ಲೆ ಇದೆ. ಹೀಗೆ ಆಂಧ್ರ ಮಹಾರಾಷ್ಟ್ರ ಗಡಿಗೆ ಹೊಂದಿಕೊಂಡ ಜಿಲ್ಲೆ ಇದಾಗಿದ್ದು, ಇಲ್ಲಿನ ಕನ್ನಡ ಭಾಷೆ ಮರಾಠಿ, ತೆಲುಗು, ಉರ್ದು, ಹಿಂದಿ, ಸಂಸ್ಕೃತ, ಇಂಗ್ಲೀಷ ಮುಂತಾದ ಸಂಮಿಶ್ರ ಭಾಷೆಗಳಿಂದ ಕೂಡಿದ್ದರೂ ತನ್ನದೇ ಆದ ವೈಶಿಷ್ಟ್ಯತೆ ಹೊಂದಿರುವುದು, ಗಮನಾರ್ಹವೆನಿಸುತ್ತದೆ.

ಬೀದರ ಜಿಲ್ಲೆಯು ಪೂರ್ವದಿಂದ ಪಶ್ಚಿಮಕ್ಕೆ ೯೩.೪ ಕಿ.ಮೀಟರ ಉದ್ದಳತೆ ಹೊಂದಿದ್ದು, ದಕ್ಷಿಣೋತ್ತರವಾಗಿ ೧೧೫.೨ ಕಿಲೋಮೀಟರ ಇದ್ದು, ಜಿಲ್ಲೆಯ ಒಟ್ಟು ವಿಸ್ತೀರ್ಣ ೫೪೫೮.೯ ಚದುರ ಕಿಲೋ ಮೀಟರ್ ಇದೆ. ಜಿಲ್ಲೆಯ ಧರಿಪ್ರಾಂತದಲ್ಲಿ ಫಲವತ್ತಾದ ಕೆಂಪು ಮಣ್ಣು ಹೊಂದಿದ್ದು ಇನ್ನುಳಿದ ಅರ್ಧಪ್ರಾಂತ ಕಪ್ಪು ಮಣ್ಣಿನಿಂದ ಕೂಡಿದೆ. ಇಲ್ಲಿ ಕಾರಂಜಾ ಮತ್ತು ಮಾಂಜರಾ ದೊಡ್ಡ ನದಿಗಳು. ಮುಲ್ಲಾಮಾರಿ ಚಿಕ್ಕನದಿ. ಚುಲ್ಕಿ ನಾಲಾ, ಮಾಣಿಕನಗರ ನಾಲಾ, ಮುಧುರಾ ನಾಲಾ, ಹಳ್ಳಿಖೇಡ ನಾಲಾಗಳು ಪ್ರವಾಹಗಳಾಗಿವೆ.

"ಮಹಾಭಾರತ ಕಾಲದಲ್ಲಿ ಬೀದರ ಪ್ರದೇಶವನ್ನು 'ಕುಂತಳನಾಡು' ಮತ್ತು 'ವಿದುರಾನಗರ' ಎಂದು ಕರೆಯುತ್ತಿದ್ದಿರಬಹುದೆಂದು ಭಾವಿಸಲಾಗಿದೆ. ಮಹಾಭಾರತ ಗ್ರಂಥದಲ್ಲಿ 'ಕರ್ನಾಟಕ ಮಹಿಷಿಕಾ ವಿಕಲ್ಪ ಮೂಷಕಸ್ತಥಾ ಝುಲ್ಲಿಕಾ ಕುಂತಲಾಶ್ಚೈವ ಸೌಹೃದಾ ನಭ ಕಾನನ: ಎಂಬ ಉಲ್ಲೇಖ ಬಂದಿದೆ. ಈ ಕುರಿತು ಡಾ. ತಿಪ್ಪೇರುದ್ರಸ್ವಾಮಿಯವರು 'ಕರ್ನಾಟಕ ಮತ್ತು ಕುಂತಲಗಳು ಕನ್ನಡ ನಾಡಿನ ಭಾಗವನ್ನು ಸೂಚಿಸುತ್ತವೆ. ಈ ನಾಡಿನ ದಕ್ಷಿಣ ಭಾಗವನ್ನು ಕರ್ನಾಟಕ ಎಂಬುದಾಗಿ ಉತ್ತರ ಭಾಗವನ್ನು ಕುಂತಲ ಎಂಬುದಾಗಿಯೂ ಆ ಕಾಲದಲ್ಲಿ ಕರೆಯುತ್ತಿದ್ದಂತೆ ತೋರುತ್ತದೆ"[೧] ಎಂದಿದ್ದಾರೆ. ಬೀದರ ಎಂಬ ಪದ ವಿದರ್ಭ ಎಂಬುದಕ್ಕೆ ಹೋಲುವುದರಿಂದ ಮಹಾಭಾರತದಲ್ಲಿ ಉಲ್ಲೇಖವಿರುವ ವಿದುರ ನಗರವೇ ಬೀದರ ಆಗಿರಬೇಕೆಂದು ಒಂದು ಹೇಳಿಕೆಯಾದರೆ, ಇದು ನಳ-ದಮಯಂತಿಯರ ಪ್ರಖ್ಯಾತ ಪ್ರಣಯ ಉದ್ಯಾನವೆಂತಲೂ ನಂಬಿಕೆ ಹೊಂದಿದೆ.

"ನಮ್ಮ ಪ್ರಾಚೀನ ಕಲೆ, ಸಾಹಿತ್ಯ ರಾಜಪ್ರಭುತ್ವದ ಅಡಿಯಲ್ಲಿ ಅರಳುತ್ತಿದುದ್ದರಿಂದ ಈ ಭಾಗವನ್ನಾಳಿದ ರಾಜರನ್ನು, ರಾಜಮನೆತನಗಳನ್ನು ನೆನಪಿಸುವುದಿಲ್ಲಿ ಸೂಕ್ತ. ಈ ಪ್ರದೇಶವು ಮೌರ್ಯ, ಶಾತವಾಹನ, ರಾಷ್ಟ್ರಕೂಟ ಕಲ್ಯಾಣಿ ಚಾಲುಕ್ಯ, ಕಳಚೂರಿ, ದೇವಗಿರಿ ಯಾದವ, ಬಹಮನಿ ಸುಲ್ತಾನ, ಬರೀದಶಾಹಿ ಸುಲ್ತಾನ, ಹೈದ್ರಾಬಾದ ನಿಜಾಮ ಆಳ್ವಿಕೆಗೆ ಒಳಪಟ್ಟಿದೆ. ಹೀಗಾಗಿ ಈ ಪ್ರದೇಶವನ್ನು ಅನೇಕಾನೇಕ ಅರಸರ ಮಾಂಡಲಿಕರ, ಸಾಮಂತರಸರ ದಂಡನಾಯಕರ, ಮಂತ್ರಿಗಳ ನಾಳ್ಗಾಂವುಂಡರ, ಗಾವುಂಡರ, ಸೇನಬೋವರಸರ ಆಡಳಿತಕ್ಕೆ

ಒಳಪಟ್ಟು ಸಂಗತಿ ಇತಿಹಾಸದಿಂದ ತಿಳಿದು ಬರುತ್ತದೆ."[೨] ಆದರೆ ಪ್ರಾಚೀನ ಕಾಲದ ಇತಿಹಾಸ ಅಸ್ಪಷ್ಟವಾಗಿದ್ದು ರಾಷ್ಟ್ರಕೂಟರ ಕಾಲದ ಇತಿಹಾಸ ಸ್ಪಷ್ಟವಾಗಿ ಕಾಣಸಿಗುತ್ತದೆ.

ಬಾದಾಮಿ ಚಾಲುಕ್ಯರ ಕಾಲದಲ್ಲಿ ಉನ್ನತಿ ಪಡೆದ ಬೀದರ ಜಿಲ್ಲೆಯನ್ನು ಅವರ ಅವನತಿಯ ನಂತರ ರಾಷ್ಟ್ರಕೂಟರು ಆಳತೊಡಗಿದರು. "ಗುಲಬರ್ಗಾ ಜಿಲ್ಲೆಯ ಸೇಡಂ ತಾಲೂಕಿನ ಮಳಖೇಡವನ್ನು ರಾಜಧಾನಿಯನ್ನಾಗಿ ಮಾಡಿಕೊಂಡರು ಆಗ ಬೀದರ ಭಾಗವು ಇವರ ಆಳ್ವಿಕೆಗೆ ಒಳಪಟ್ಟಿತ್ತು. ಇವರ ಕಾಲದಲ್ಲಿ ಮೊರಖಂಡಿಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಎಂದು ಆ ಕಾಲದ ಶಾಸನಗಳಲ್ಲಿ ಉಲ್ಲೇಖವಾಗಿದೆ."[೩] "ಈ ಮೊರಖಂಡಿಯಲ್ಲಿ ಐದು ಗುಹಾಲಯಗಳು, ಸಪ್ತಮಾತೃಕೆಗಳು ಏಳು ಪ್ರತ್ಯೇಕ ಶಿಲ್ಪಗಳು, ಒಂದು ಶಿವಲಿಂಗ ಒಂದು ಚೌರಿ ಹಿಡಿದ ಸೇವಕ ಮಹಿಷಮರ್ದಿನಿ ನಟರಾಜ ಶಿಲ್ಪಗಳು ಕಂಡು ಬಂದಿದ್ದು, ಅವುಗಳಿಗೆ ಕ್ರಿ.ಶ.೮–೯ನೇ ಶತಮಾನದ ಲಕ್ಷಣಗಳಿವೆ. ಗುಹಾಲಯಗಳು ಬಾದಾಮಿ, ಐಹೊಳೆಯ ನಂತರ ಸ್ಥಾನವನ್ನು ಪಡೆಯುತ್ತವೆ"[೪] ಎನ್ನಲಾಗಿದೆ."೧೦ ನೆಯ ಶತಮಾನದಲ್ಲಿ ಕಲ್ಯಾಣಿ ಚಾಲುಕ್ಯರ ಆಳ್ವಿಕೆ ಪ್ರಾರಂಭ. ಕಲ್ಯಾಣ ರಾಜಧಾನಿ ಬೀದರೆಯ ಉಜ್ವಲ ಇತಿಹಾಸದ ಮೊದಲ ಅಧ್ಯಾಯ ಪ್ರಾರಂಭ."[೫] ೬ನೇ ವಿಕ್ರಮಾದಿತ್ಯನ ಆಶ್ರಯದಲ್ಲಿ ಅನೇಕ ಪಂಡಿತರು ಕವಿಗಳು ಕಲೆಗಾರರು ಇದ್ದರು. ಬಿಲ್ಹಣ, ವಿಜ್ಞಾನೇಶ್ವರ, ವಾದಿರಾಜ ಮುಂತಾದ ಕವಿಗಳು ಅನೇಕ ಗ್ರಂಥ ರಚಿಸಿದರು. ೬ನೇ ವಿಕ್ರಮಾದಿತ್ಯನ ಆಶ್ರಯದಲ್ಲಿದ್ದ ವಿಜ್ಞಾನೇಶ್ವರನು ಕಲ್ಯಾಣ ಹಾಗೂ ವಿಕ್ರಮಾದಿತ್ಯನನ್ನು ಕುರಿತು.

"ನಾಸ್ತಿ ದಸ್ತಿ ಭವಿಷ್ಯತಿ ಕ್ಷಿತಿತಲೇ ಕಲ್ಯಾಣ ಕಲ್ಪಪುರಂ ।
ನೋದ್ರಷ್ಟ: ಶ್ರುತಏವವಾ ಕ್ಷಿತಿವತಿ: ಶ್ರೀ ವಿಕ್ರಮಾರ್ಕೋಪಮ:"[೬]॥

ಈ ಭೂಮಿಯ ಮೇಲೆ ವಿಕ್ರಮಾದಿತ್ಯನಂಥ ಚಕ್ರವರ್ತಿ ಕಲ್ಯಾಣದಂಥ ಪಟ್ಟಣ ಹಿಂದೆಯೂ ಇರಲಿಲ್ಲ ಮುಂದೆಯೂ ದೊರಕುವುದಿಲ್ಲವೆಂದು ತುಂಬು ಹೃದಯದಿಂದ ಹೊಗಳಿದ್ದಾನೆ. ಕಲ್ಯಾಣ ಚಾಲುಕ್ಯರ ಅವಧಿಯಲ್ಲಿ ಈ ಭಾಗವು ಸರ್ವದೃಷ್ಟಿಯಿಂದ ಸಮೃದ್ಧವಾಗಿತ್ತು. ಈ ಅರಸರ ಕಾಲದಲ್ಲಿ ಅನೇಕ ಕವಿಗಳು ಕೃತಿಗಳನ್ನು ರಚಿಸಿದ್ದಾರೆ.

ಬೀದರ ಜಿಲ್ಲೆಯು ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರ ಗಡಿ ಸೀಮೆಯಾಗಿರುವುದರಿಂದ ಇಲ್ಲಿನ ಕನ್ನಡ ಭಾಷೆಯ ಜೊತೆಗೆ ಮರಾಠಿ, ತೆಲುಗು, ಉರ್ದು, ಹಿಂದಿ ಮುಂತಾದ ಭಾಷೆಗಳ ಪ್ರಭಾವಕ್ಕೆ ಇಲ್ಲಿನ ಜನ ಒಳಗಾಗಿದ್ದಾರೆ. ಹೀಗೆ ಜಿಲ್ಲೆಯ ಸಂಸ್ಕೃತಿ ಮಿಶ್ರ ಭಾಷೆಗಳ ಪ್ರಭಾವದಿಂದ ವಿಶಿಷ್ಟವಾಗಿದೆ. ಈ ಸಂಸ್ಕೃತಿಯ ಉಸಿರಿನಿಂದ ಅರಳಿರುವ ಜನಪದ ಕಲೆಗಳು ತನ್ನದೇ ಆದ ಮಹತ್ವವನ್ನು ಪಡೆದಿವೆ. ಪ್ರತಿಯೊಂದು ಗ್ರಾಮದಲ್ಲಿಯೂ ಅನೇಕ ಕಲೆ ಹಾಗೂ ಕಲಾವಿದರು ಕಂಡು ಬರುತ್ತಾರೆ. ಕೆಲವೊಂದು ಮನೆಯಲ್ಲಿ ಕಲಾವಿದರು ಕಲೆಯನ್ನು ಪರಂಪರಾನುಗತವಾಗಿ ಉಳಿಸಿ ಬೆಳೆಸಿಕೊಂಡು ಬರುತ್ತಿದ್ದಾರೆ. ಅವರು ತಮ್ಮ ಕಲೆಗಳಿಂದಾಗಿ ಸುತ್ತಲಿನ ಗ್ರಾಮದಲ್ಲಿಯೂ ಹೆಸರು ವಾಸಿಯಾಗಿದ್ದಾರೆ.

ಪ್ರತಿಯೊಂದು ಗ್ರಾಮಗಳಲ್ಲಿ ಭಜನೆ ಮೇಳ, ಗೊಂದಲಿಗರು, ಬುಡಬುಡುಕೆರು, ಡೊಳ್ಳು ಮೇಳ, ಪೈತ್ರಿ, ಹಾಡುಗಾರಿಕೆ, ಗೀಗೀ ಪದ, ಲಾವಣಿ ಹಾಡು, ಪುರವಂತರ ಕುಣಿತ, ಶೀಗಿ ಹಾಡು, ಗೌರಿಕುಳ್ಳಿ ಪದ, ಬುಲಾಯಿ ಹಾಕುವುದು, ಜೋಕುಮಾರನ ಹಾಡು, ಕೋಲಾಟ, ಮುಂತಾದ ಕಲೆಗಳು ಈ ಜಿಲ್ಲೆಯಲ್ಲಿ ಕಾಣಸಿಗುತ್ತವೆ. "ಕಲೆಯಿಲ್ಲದ ಮನುಷ್ಯನಿಲ್ಲ ಕಲೆಗಾರರಿಲ್ಲದ ಊರಿಲ್ಲ. ಮಾನವ ಹುಟ್ಟಿನಿಂದ ಸಾಯುವವರೆಗಿನ ಎಲ್ಲಾ ಕಾರ್ಯಗಳಲ್ಲಿಯೂ ಕಲೆ ಹಾಸು ಹೊಕ್ಕಿದೆ. ಗ್ರಾಮೀಣ ಜನರ ಪ್ರತಿಯೊಂದು ಕೆಲಸಗಳಲ್ಲಿಯೂ ಕಲೆ ಕಾಣುತ್ತೇವೆ. ಅವರ ಮಾತು ಹಾಡಿನಲ್ಲಿ ಸಾಹಿತ್ಯ ತುಂಬಿದರೆ ಕ್ರಿಯೆಯಲ್ಲಿ ಕಲೆ ಅರಳಿದೆ"[೭] ಎಂಬ ಮಾತು ಸೂಕ್ತವಾಗಿದೆ. ಜಿಲ್ಲೆಯ ಜನಪದ ಕಲೆಯೂ ತನ್ನದೇ ಆದ ಹಿನ್ನೆಲೆಯನ್ನು ಹೊಂದಿ ನಿಂತಿದೆ. ಅದು

ನಿರ್ದಿಷ್ಟವಾದ ಸಂದರ್ಭದಲ್ಲಿ ಪ್ರದರ್ಶಿಸಲ್ಪಡುತ್ತದೆ. ಆಯಾ ಕಲೆಗಳು ಧರ್ಮ, ದೇವರು, ಪಂಥ, ಸಮಾಜ ಮುಂತಾದವುಗಳಿಂದ ಹುಟ್ಟಿ ಬೆಳೆದಿವೆ. ಕಲೆಗಳ ಉಗಮಕ್ಕೂ ಮಾನವನ ಸಾಂಸ್ಕೃತಿಕ ಇತಿಹಾಸಕ್ಕೂ ಬಿಡಿಸಲಾರದ ನಂಟಿದೆ. ಕಲೆ ಮೊದಲು ಒಬ್ಬ ವ್ಯಕ್ತಿಯಿಂದ ರಚನೆಯಾಗಿ ತೀವ್ರ ಆಕರ್ಷಣೆಯಿಂದ ಸಾಮೂಹಿಕವಾಗಿ ಮಾರ್ಪಟ್ಟಿವೆ. ಮಾನವನ ಬುದ್ಧಿ ವಿಕಾಸವಾದಂತೆ ವೈವಿಧ್ಯಮಯವಾದ ಕಲೆಗಳು ಸೃಷ್ಟಿಗೊಂಡವು. ಇಲ್ಲಿನ ಜನರ ಜೀವನ ವಿಧಾನದ ಮೇಲೆ ಸಾಂಸ್ಕೃತಿಕ ಪರಂಪರೆಯ ಮೇಲೆ ಜನಪದ ಕಲೆಗಳು ಬೆಳಕು ಹರಿಸಿವೆ. ಜನಪದ ಕಲೆಗಳಿಂದ ಮಾನವನ ಸಾಂಸ್ಕೃತಿಕ ಇತಿಹಾಸವನ್ನು ಅರಿಯಬಹುದು.

ಈ ಜಿಲ್ಲೆಯ ಜನಪದ ಕಲೆಯ ಉಗಮವನ್ನು ಕುರಿತು ನಿಖರವಾಗಿ ಹೇಳುವುದು ಕಷ್ಟದ ಕೆಲಸ. ಆದರೆ "ಸಮಾಜಶಾಸ್ತ್ರಜ್ಞರು ಕಲೆಯ ಉಗಮವನ್ನು ಸಾಮಾಜಿಕ ಜೀವನದ ವಿಕಾಸದಲ್ಲಿ ಕಾಣುತ್ತಾರೆ. ಮಾನವ ಶಾಸ್ತ್ರಜ್ಞರು ಮನಸ್ಸಿನ ಸೂಕ್ಷ್ಮ ಚಲನವಲನಗಳ ಅಭಿವ್ಯಕ್ತಿಯೇ ಕಲೆಯೆಂದು ಅದನ್ನು ಅಳೆಯತೊಡಗುತ್ತಾರೆ."[೮] "ಜನಪದ ಕಲಾ ಪ್ರಪಂಚ ಜನಜೀವನದಷ್ಟೇ ವಿಶಾಲವಾದದ್ದು ವ್ಯಾಪಕವಾದದ್ದು ಆಯಾ ಕಾಲದ ಮಾನವನ ಅಗತ್ಯಗಳು ಕಲೆಗಳ ಉಗಮ ವಿಕಾಸ ವೈವಿಧ್ಯಗಳಿಗೆ ಕಾರಣವಾಗಿವೆ. ಅವನ ಆಶೋತ್ತರಗಳಿಗೆ ಅವನ ಮಾನಸಿಕ ವ್ಯಾಪಾರಗಳಿಗೆ, ಅವನ ಬೌದ್ಧಿಕ ವಿಕಾಸಕ್ಕೆ ಅವನ ಕಲ್ಪನಾ ಸಾಮರ್ಥ್ಯಕ್ಕೆ ಆಯಾ ಕಾಲದ ಸಾಂಸ್ಕೃತಿಕ ವಿಚಾರಗಳಿಗೆ ಅವು ಸಾಕ್ಷಿಯಾಗಿ ನಿಲ್ಲುತ್ತವೆ"[೯] ಎಂದು ಹೇಳಬಹುದು.

ಬೀದರ ಜಿಲ್ಲೆಯ ಜನಪದ ಕಲೆಗಳ ಹುಟ್ಟು ಇಲ್ಲಿಯ ಆದಿ ಮಾನವನಷ್ಟೇ ಪ್ರಾಚೀನವಾಗಿದೆ. ಆದರೂ ಈ ಕಲೆಗಳ ಬಗ್ಗೆ ಮಾಹಿತಿ ದೊರಕುವುದು ಇದೆ ಭಾಗದ ಕೃತಿ ಕವಿರಾಜಮಾರ್ಗದ ಕಾಲದಿಂದಲೇ

ಪದನರಿದು ನುಡಿಯಲುಂ ನುಡಿ
ದುದನರಿದಾಯಲು ಮಾರ್ಪರಾ ನಾಡಾರ್ವಗಳ್
ಚದುರರ್ ನಿಜದಿಂ ಕುರಿತೋ
ದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್

ಎಂಬ ಶ್ರೀವಿಜಯನ ಮಾತು ಸಾಹಿತ್ಯದಂತೆ ಜನಪದ ಕಲೆಗೂ ಅನ್ವಯಿಸುತ್ತದೆ. ಜನಪದರು ಯಾವುದೆ ಅಕ್ಷರ ಓದಿನಿಂದ ಶಾಲೆಯಿಂದ ಈ ಕಲೆಯನ್ನು ಕಲಿತು ಕೊಂಡವರಲ್ಲ. "ಬಹುಶಃ ಮಾನವನಿಗೆ ಗಾಳಿ, ಬೆಳಕು, ನೀರು, ಆಹಾರದಷ್ಟೇ ಕಲೆಗಳ ಅಗತ್ಯತೆ ಹಾಗೂ ಅನಿವಾರ್ಯತೆ ಕಂಡು ಬಂದಿರಬೇಕು. ಅಂತೆಯೇ ಅನಾದಿ ಕಾಲದಿಂದ ಇಲ್ಲಿಯವರೆಗೆ ಜನಪದ ಕಲೆಗಳು ಜನಪದರ ಉಸಿರಾಗಿ, ಜೀವಂತವಾಗಿ ಉಳಿದುಕೊಂಡು ಬಂದಿವೆ, ಕಾರಣ ಜೀವಂತಿಕೆ ಯಾವುದೇ ಸಾಹಿತ್ಯ ಸಂಸ್ಕೃತಿ ಹಾಗೂ ಕಲೆಗಳ ಪ್ರಮುಖ ಲಕ್ಷಣವಾಗಿದೆ."[೧೦] ಎಂಬ ಮಾತನ್ನು ನಾವಿಲ್ಲಿ ಗಮನಿಸಬಹುದು. ಹಬ್ಬ-ಹರಿದಿನ, ಜಾತ್ರೆ-ಉತ್ಸವಗಳಲ್ಲಿ ಪ್ರದರ್ಶನಗೊಳ್ಳುವ ಇಂಥ ಕಲೆಗಳು ಆಯಾ ಪ್ರದೇಶದ ಜನಾಂಗದ ನಾಡಿನ ಭವ್ಯ ಪರಂಪರೆಯ ಅಪೂರ್ವ ಸಂಪತ್ತೆನಿಸುತ್ತವೆ. ಯಾಕೆಂದರೆ ಇಲ್ಲಿ ಮಾನವ ಸಂಸ್ಕೃತಿಯ ಶ್ರೀಮಂತಿಕೆಯನ್ನು ಜೀವಂತವಾಗಿ ಕಾಣಬಹುದು. ಜಿಲ್ಲೆಯ ಜನಪದ ಕಲೆಗಳು ವೈವಿಧ್ಯತೆಯಿಂದ ಕೂಡಿವೆ. "ಆರಾಧನೆ ಮತ್ತು ಆಚರಣೆಗಳ ಕ್ರಿಯೆಗಳೇ ಕಲೆಗಳಾಗಿ ವಿಕಸನ ಹೊಂದಿ ಪೂರ್ಣ ಸ್ವರೂಪದ ಕಲೆಗಳಾದದ್ದು ಒಂದು ಬಗೆಯಾದರೆ, ಧರ್ಮ ಅಥವಾ ಪಂಥ ಪ್ರಸಾರಕ್ಕಾಗಿ ಹುಟ್ಟಿದ ಕಲೆಗಳು ನಂತರ ಧರ್ಮ ಪಂಥದ ಉದ್ದೇಶ ಮೀರಿ ಸಾರ್ವಜನಿಕ ಕಲೆಗಳಾದದ್ದು ಇನ್ನೊಂದು ಬಗೆ. ಕಲೆಯೇ ವೃತ್ತಿಯಾಗಿ ನಂತರ ಅದೊಂದು ಪರಂಪರೆಯಾಗಿ ಬೆಳೆದದ್ದು ಒಂದು ಬಗೆಯಾದರೆ, ಇರುವ ವ್ಯವಸ್ಥೆಗೆ ಪ್ರತಿಭಟನೆಯಾಗಿ ಹೊಸ ಕಲೆಗಳೇ ಹುಟ್ಟಿಕೊಂಡದ್ದು ಮತ್ತೊಂದು ಬಗೆ"[೧೧] ಎಂಬುದು ಮಹತ್ವದ ಸಂಗತಿ.

"ಜನಪದ ಕಲೆಗಳು ಜನತೆಯಿಂದಲೇ ಬೆಳೆದು ಬಂದಿವೆ. ಜನಾಂಗ ಪರಂಪರೆಯಲ್ಲಿ ಬೆರೆತು ಮುಂದುವರೆದಿವೆ. ಕಾಲಕಾಲಕ್ಕೆ ಬದಲಾವಣೆಯಾದರೂ, ಪ್ರಾದೇಶಿಕ ಭಿನ್ನತೆ ಪಡೆದರೂ, ಮೂಲದಲ್ಲಿ ಸಮಸ್ತ

ಜನಾಂಗದ ಇತಿಹಾಸವನ್ನೇ ನಿರೂಪಿಸುತ್ತವೆ. ಮೊದಲು ಒಬ್ಬನಿಂದ ನಿರ್ಮಿತವಾದರೂ ಆಕರ್ಷಣೆಯ ತೀವ್ರ ಸಂವೇದನೆಯಿಂದ ಸಾಮೂಹಿಕ ಕಲೆಗಳಾಗಿವೆ. ಆದಿ ಮಾನವನ ನಿತ್ಯದ ಕೆಲಸಗಳಲ್ಲಿಯೇ ಸೃಷ್ಟಿಗೊಂಡರೂ ಸಾಂಘಿಕ ಜೀವನದಲ್ಲೇ ಬೆಳೆದಿದೆ. ಸಾಮಾಜಿಕ ಬದುಕಿಗೆ ಪೂರಕವಾಗಿ, ಸಂಸ್ಕೃತಿಯ ಅಭಿವೃದ್ಧಿಗೆ ಪ್ರೇರಕ ಶಕ್ತಿಯಾಗಿವೆ. ಮಾನವ ಪ್ರಜ್ಞೆ ಬೆಳೆದಂತೆ ವೈವಿಧ್ಯಮಯ ಕಲೆಗಳು ಬೆಳೆದು ಬಂದಿವೆ"[೧೨] ಎನ್ನಬಹುದು.

"ಅಪ್ಪಟ ಮಾನವ ಧರ್ಮದ ಹರಿಕಾರರಾಗಿ ಬಂದ ಶಿವಶರಣರು ಜನತೆಯನ್ನು ಪರಾವಲಂಬಿತ್ವ, ದಾರಿದ್ರ್ಯ, ಅಂಧಶ್ರದ್ಧೆ, ಮೂಢ ಆಚರಣೆ, ಕ್ರೂರ ಸಂಪ್ರದಾಯಗಳಿಂದ ಮುಕ್ತಗೊಳಿಸಿ, ಭಕ್ತಿಯುಕ್ತ, ಶೋಷಣೆಮುಕ್ತ, ನವಸಮಾಜ ನಿರ್ಮಾಣ ಸಂಕಲ್ಪ ಮಾಡಿದರು. ಸಕಲ ಜೀವಾತ್ಮರಿಗೆ ಲೇಸ ಬಯಸುವ ಪರಮಗುರಿಯನ್ನು ಜನಪದರಿಗೆ ವಿವರಿಸಿ, ತಿಳಿಸಿ ಹೇಳಲು ಅನೇಕ ಬಗೆಯ ಪ್ರಸಾರಕ ಕ್ರಮಗಳನ್ನು ರೂಪಿಸಿಕೊಂಡರು. ಅವರು ಬಳಸಿಕೊಂಡ ಅನೇಕ ಮಾಧ್ಯಮಗಳಲ್ಲಿ ಜನಪದ ಕಲೆಯೂ ಒಂದು"[೧೩] ಎಂಬುದು ಗಮನಾರ್ಹವಾಗಿದೆ. ಸಾಮಾಜಿಕ ಕಳಕಳಿ, ಮಾನವ ಕಲ್ಯಾಣ, ಸಮಾನತೆ, ತತ್ತ್ವಪ್ರಸಾರ, ಆರ್ಥಿಕ ಪ್ರಗತಿ ಮುಂತಾದ ಧೋರಣೆಯುಳ್ಳ ಬಸವಾದಿ ಶಿವಶರಣರ "ಆಂದೋಲನದ ಫಲವಾಗಿ ಜನಪದ ಕಲೆಗಳು ಮಾನವೀಕರಣಗೊಂಡದ್ದು, ಪ್ರಪಂಚದ ಸಾಮಾಜಿಕ ಚರಿತ್ರೆಯಲ್ಲಾಗಲಿ ಕಲೆಯ ಚರಿತ್ರೆಯಲ್ಲಾಗಲಿ ಒಂದು ವಿರಳ ಸಂದರ್ಭ, ಸಾಧನೆ"[೧೪] ಎಂಬ ಮಾತು ಇಲ್ಲಿ ಮಹತ್ವದ್ದಾಗಿದೆ.

"ಕಲಚೂರಿ ವಂಶದ ರಾಜನಾದ ಬಿಜ್ಜಳನ ಆಸ್ಥಾನದ ಮುಖ್ಯಮಂತ್ರಿಯಾಗಿದ್ದ ಬಸವಣ್ಣನವರು, ಸಮರ್ಥ ಮುಂದಾಳತ್ವವಹಿಸಿ ಶರಣರ ಸಾಮೂಹಿಕ ಜೀವನದ ರೂವಾರಿಯಾದರು. ವೃತ್ತಿಯಿಂದ ಮೇಲುಕೀಳೆನ್ನದೆ ಸರ್ವರೂ ಅವನ ಅರಿವಿನ ಅನುಭಾವದಲ್ಲಿ ಪಾಲುಗಾರರಾದರು. ಸತ್ಯ ಶುದ್ಧ ಆಚರಣೆಯಿಂದ ವೃತ್ತಿಗಳು ಕಾಯಕವೆನಿಸಿದಂತೆ, ಸರ್ವಕಲೆಗಳೂ ಕಾಯಕವೆನಿಸಿದವು. ಕಲೆಗಳನ್ನು ಕಾಯಕ ಮಟ್ಟಕ್ಕೇರಿಸಿ, ಶರಣರು ಅವುಗಳನ್ನು ಉಳಿಸಿ ಬೆಳೆಸಿದರು. ಸಂಗೀತ, ವಾದ್ಯ, ನೃತ್ಯ, ನಾಟಕ, ಗಮಕ, ಹಾಸ್ಯ ಮುಂತಾದ ಎಲ್ಲ ಕಲೆಗಳಲ್ಲಿಯೂ ಶರಣರು ಬಲ್ಲಿದರಾಗಿದ್ದರು."[೧೫]

"ಜನಪದ ಕಲೆಗಳಿಗೂ ಜನಜೀವನಕ್ಕೂ ಅವಿನಾಭಾವ ಸಂಬಂಧವಿದೆ. ದಿನನಿತ್ಯದ ದುಡಿಮೆಯ ಆಯಾಸ, ಬದುಕಿನ ಏಕತಾನತೆ, ಆಸರಿಕೆ ಬೇಸರಿಕೆಗಳನ್ನು ನಿವಾರಿಸಿಕೊಳ್ಳಲು ಮನುಷ್ಯ ಕಲೆಗಳ ಮೊರೆ ಹೊಕ್ಕಿದ್ದಾನೆ. ಇವುಗಳನ್ನು ಜೋಪಾನವಾಗಿ ರಕ್ಷಿಸಿ, ಬೆಳಸಿ ಮುಂದುವರಿಸಿಕೊಂಡು ಬಂದಿದ್ದಾನೆ"[೧೬] ಎಂಬುದು ಜಿಲ್ಲೆಯ ಶರಣ ಚಳುವಳಿಯಲ್ಲಿ ಗುರುತಿಸಬಹುದು. ೧೨ನೇ ಶತಮಾನ ಬೀದರ ಜಿಲ್ಲೆಯ ಇತಿಹಾಸದಲ್ಲಿ ಸಾಂಸ್ಕೃತಿಕವಾಗಿ ಉಜ್ವಲತೆಯನ್ನು ಕಾಣಬಹುದು. ಕಲ್ಯಾಣದಲ್ಲಿ ಬಸವಣ್ಣನ ನೇತ್ರತ್ವದಲ್ಲಿ ಶರಣರು ಕ್ರಾಂತಿ ಕಹಳೆ ಮೊಳಗಿಸಿದ ಕಾಲ. ಮದ್ದಳೆಯ ಅಲ್ಲಮಪ್ರಭು, ಬಹುರೂಪಿ ಚೌಡಯ್ಯ, ಕಿನ್ನರಿ ಬೊಮ್ಮಯ್ಯ ವೈದ್ಯ ಸಂಗಣ್ಣ ಮುಂತಾದ ಶಿವಶರಣ-ಶರಣೆಯರು ಇಲ್ಲಿನ ನೆಲದಲ್ಲಿ ನೆಲೆಸಿ ತಮ್ಮ ಕಲಾವಂತಿಕೆ ಮೆರೆದರು. ಹಾಗೆಯೇ ತಮ್ಮ "ಸಾಂಸ್ಕೃತಿಕ ಬದುಕನ್ನು ಚರ್ಚಿಸಿ, ನವೋದಯವನ್ನು ಕಾಣಿಸಿದರು. ಕಲ್ಯಾಣವನ್ನು ಭೂಮಿಯ ಮೇಲಿನ ಕೈಲಾಸವನ್ನಾಗಿ ಮೆರೆಸಿದರು. ಕಳಚುರಿ ರಾಜರ ಆಳ್ವಿಕೆಯ ಈ ಕಾಲದಲ್ಲಿ ಧಾರ್ಮಿಕ ಸಾಹಿತ್ಯಿಕ ಹಾಗೂ ಸಾಮಾಜಿಕ ರಂಗಗಳಲ್ಲಿ ಸಾಂಸ್ಕೃತಿಕ ಬದುಕು ಸ್ಥಿತ್ಯಾಂತರಗೊಂಡಿತು. ಸಾಂಸ್ಕೃತಿಕ ವೇದಿಕೆ ಶ್ರೀ ಸಾಮಾನ್ಯನೊಂದಿಗೆ ಸಂವಾದಕ್ಕೆ ಸಹಕರಿಸಿ ಆ ಮೂಲಕ ಆರ್ಥಿಕ ಪ್ರಗತಿಯ ಮಾರ್ಗ ಕಂಡುಕೊಂಡು ಸಂವೇದನಾತ್ಮಕ ಸಾಂಸ್ಕೃತಿಕ ಸಾಮರಸ್ಯದ ಮೂಲಕ ಮಾನವ ಪ್ರಗತಿಗೆ ನಾಂದಿ ಹಾಡಿತು"[೧೭] ಎಂಬುದು ಇಲ್ಲಿ ಗಮನಿಸುವಂತಿದೆ.

ಭಕ್ತಿ ಭಂಡಾರಿ ಬಸವಣ್ಣನವರ ಈ ವಚನದಲ್ಲಿ ಜನಪದ ಗಾಯನ ಶೈಲಿಯನ್ನು ಕುರಿತು ಹೇಳಿರುವುದು ಕಂಡುಬರುತ್ತದೆ.

"ತಾಳಮಾನ ಸರಸವನರಿಯೆ,
ಓಜೆ ಬಜಾವಣೆಯ ಲೆಕ್ಕವನರಿಯೆ
ಅಮೃತಗಣ ದೇವಗಣವನರಿಯೆ,
ಕೂಡಲ ಸಂಗಮದೇವಾ, ನಿನಗೆ ಕೇಡಿಲ್ಲವಾಗಿ
ಆನು ಒಲಿದಂತೆ ಹಾಡುವೆ"[೧೮]

ಎನ್ನುವ ಬಸವಣ್ಣವರು ಮುಕ್ತವಾಗಿ ತಮ್ಮ ಕಾಲದಲ್ಲಿ ಹಾಡುವ ಜನಪದವನ್ನೇ ಕುರಿತು ಹೇಳುತ್ತಾ, ತಾವು ಅದರ ಒಂದು ಭಾಗವಾಗಿ ಹಾಡಿರುವುದನ್ನು ಇಲ್ಲಿ ತಿಳಿಸುತ್ತಾರೆ. ಅವರ ಎನ್ನ ಕಾಯವ ದಂಡಿಗೆ ಮಾಡಯ್ಯಾ ಎಂದು ಪ್ರಾರಂಭವಾಗಿ ಬತ್ತಿಸ ರಾಗವ ಹಾಡಯ್ಯಾ ಎಂಬ ವಚನದಲ್ಲಿ ೩೨ ರಾಗಗಳ ಸಂಗೀತ ಕಲೆಯ ಪರಿಣತಿ ಎತ್ತಿ ತೋರುತ್ತದೆ. "ಅಯ್ಯಾ ನೀನು ನಾಟ್ಯಕ್ಕೆ ನಿಂದಲಿ ನಾನು ಚೈತನ್ಯವೆಂಬ ವಾಹನವಾಗಿರ್ದೆ ಕಾಣಾ ಎಂಬಲ್ಲಿ ತಾಂಡವ ನೃತ್ಯ ಮಾಡಿದ ಶಿವನಿಗೆ ನರ್ತಿಸುವಲ್ಲಿ ಚೈತನ್ಯ ಶಕ್ತಿಯಾಗಿದ್ದೆನೆಂದು ಭಕ್ತಿಯ ಆವೇಶದಿಂದ ಹೇಳಿದರೂ"[೧೯] ಇಲ್ಲಿ ಬಸವಣ್ಣನವರಿಗಿದ್ದ ನಾಟ್ಯಕಲೆಯ ಪರಿಜ್ಞಾನವನ್ನು ಕಾಣಬಹುದು.

ಬೀದರ ಜಿಲ್ಲೆಯ ರೇಕುಳಗೆ (ರೇಕಳಿಕೆ) ಊರಲ್ಲಿ ಹುಟ್ಟಿ ಬೆಳೆದ ಜನಪದ ಕಲಾವಿದ ಶರಣ ಬಹುರೂಪಿ ಚೌಡಯ್ಯ ಪ್ರಿಯನಾಗಿನಾಥ ಎಂಬ ಅಂಕಿತದಲ್ಲಿ ವಚನ ಬರೆದಿದ್ದಾನೆ. ಬಹುರೂಪಿ ಕಾಯಕವನ್ನೆ ವೃತ್ತಿಯನ್ನಾಗಿ ಮಾಡಿಕೊಂಡ ಚೌಡಯ್ಯ "ಬಹುರೂಪಿ ಸ್ಪರ್ಧೆಯಲ್ಲಿ ಅಚ್ಯುತ ಮತ್ತು ಯಕ್ಷನಾಥರನ್ನು ಸೋಲಿಸಿ ತನ್ನ ಶಿಷ್ಯರನ್ನಾಗಿ ಮಾಡಿಕೊಂಡನು. ಶಿವನ ಭಕ್ತನಾದ ಈತನಿಗೆ ದಾಸೋಹ ಮಾಡಲು ತೊಂದರೆಯಾಗಲು ತನಗೆ ಪ್ರಿಯವಾದ 'ರಾಮಕ್ರಿಯೆ' ಯೆಂಬ ರಾಗವನ್ನೆ ರಾಮದೇವನೆಂಬ ರಾಜನಲ್ಲಿ ಒತ್ತೆಯಿಟ್ಟು ೧೨೦೦೦ ವರಹಗಳನ್ನು ಸಾಲ ಪಡೆಯುವನು. ಚೌಡಯ್ಯನಿಗೆ ಸಾಲ ತೀರಿಸುವದೆ ಆಗಲಿಲ್ಲ. ಭಕ್ತನ ಸಂಕಟ ಪರಿಹರಿಸಲು ಶಿವನೆ ನಾಗಿನಾಥನೆಂಬ ಜಂಗಮ ವೇಷದಲ್ಲಿ ಬಂದು ಅಡವಿಟ್ಟ ರಾಮಕ್ರಿಯೆ ರಾಗವನ್ನು ಬಿಡಿಸಿಕೊಟ್ಟು ಶಿವ-ಶರಣರ ಕಥೆಗಳನ್ನಾಡಲು ಹೇಳಿದನು. ಅಂದಿನಿಂದ ಚೌಡಯ್ಯ ಶಿವ-ಶರಣರ ಕಥೆಗಳನ್ನು ಶಿವನ ಲೀಲೆಗಳನ್ನು ಬಹುರೂಪಿಯಾಗಿ ಅಭಿನಯಿಸುತ್ತಾ ಕಲ್ಯಾಣಕ್ಕೆ ಬಂದು ಶರಣರ ಅನುಭಾವ ಮಂಟಪದಲ್ಲಿ ಬೆರೆತು"[೨೦] ಕಲೆಯನ್ನು ಕಾಯಕವೆಂದು ಅರಿತು ಬಾಳಿದನು, ತನ್ನ ವಚನದಲ್ಲಿ

"ಎಂಬತ್ತು ನಾಲ್ಕು ಲಕ್ಷ ಬಹುರೂಪ
ಚಂದ ಚಂದದಲ್ಲಿ ಆಡಿ
ಬಂಧುಗಳ ಮೆಚ್ಚಿಸಬಂದೆ"[೨೧]

ಎಂದು ಹೇಳಿರುವಲ್ಲಿ ಆತನು ಆ ಕಾಲದಲ್ಲಿ ಪ್ರದರ್ಶಿಸಿದ 'ಬಹುರೂಪ' ಕಲೆಗಳ ಪ್ರದರ್ಶನ ಮಾಹಿತಿ ಕಾಣಸಿಗುತ್ತದೆ.

ಶರಣರು ಜನಪದರ ಅನೇಕ ಕಲೆಗಳನ್ನು ಕಲಿತು ಅವುಗಳನ್ನು ತಮ್ಮ ಕಾಯಕವನ್ನಾಗಿ ಮಾಡಿಕೊಂಡು ಜನರ ಸಮ್ಮುಖದಲ್ಲಿ ಪ್ರದರ್ಶಿಸುವ ಕಾರ್ಯ ಕೈಗೊಂಡರು. ಕಲೆಗಳನ್ನು ಕಾಯಕವನ್ನಾಗಿ ಮಾಡಿಕೊಂಡರು. ಹೀಗಾಗಿ ಕಲೆಗಳಿಗೆ ಹೊಸ ಚೈತನ್ಯ ಬಂದಂತ್ತಾಗಿ ಆ ಸಂದರ್ಭದಲ್ಲಿ ಜನಪದ ಕಲೆಗಳು ಪುನರುಜ್ಜೀವನವಾದವು. "ಶರಣರು ಯಾವುದೇ ಕಲೆಯನ್ನು ಕಟ್ಟುನಿಟ್ಟಾಗಿ ಶಾಸ್ತ್ರ ಸಮ್ಮತವಾಗಿ ಕಲಿತವರಲ್ಲ. ಹೆಚ್ಚಾಗಿ ತಮ್ಮ ಪರಿಸರದಲ್ಲಿ ಕಂಡು ಬರುವ ಹಾಗೂ ತಮಗೆ ಸಹಜವಾಗಿ ಅಭಿನಯಿಸಲು ಸಾಧ್ಯವಿರುವ ಕಲೆಗಳನ್ನು ಅಭಿರುಚಿಗೆ ತಕ್ಕಂತೆ ಅರಿತು ಆಚರಿಸಿದವರು. ಮರೆಯದೆ ಭಕ್ತಿಯಿಂದ ಹಿಡಿದ ಕಲೆಯಲ್ಲಿಯೆ ಪೂರ್ಣ ಸಿದ್ಧಿಯನ್ನು ಪಡೆದವರು. ಶುಷ್ಕಶಾಸ್ತ್ರ ಪಂಡಿತರ ಕೀಳು ಕಲೆಯನ್ನು ಗೊಣಗಾಟಕ್ಕೆ ಕಿವಿಸೋಲದೆ, ಜನಬೆಂಬಲವನ್ನೆ ಆಧರಿಸಿ ಕಾಯಕದ ಮಟ್ಟಕ್ಕೆ ತಂದವರು. ಕಲೆಗೆ ಕೀಳು ಮೇಲುಂಟೆ? ಎಂದು ಸೆಡ್ಡು

ಹೊಡೆದು ಬದುಕಿದವರು. ನಡೆ-ನುಡಿಯಲ್ಲಿ ಕಲೆಗಳನ್ನು ಕಂಡು ಕಲಾಪೂರ್ಣರಾದವರು. ಕಲೆಯಿಂದಲೇ ಅರ್ಚಿಸಿ ಪರಶಿವನ ನೆಲೆ ಸೇರಿದ ಕಲಾವಿದ ಶರಣರನ್ನು ಹೀಗೆ ಗುರುತಿಸಬಹುದು.

| | |
|---|---|
| ಅಲ್ಲಯ್ಯ | ಮದ್ದಳೆ ಬಾರಿಸುವವ |
| ಇಕ್ಕಮಲ್ಲಯ್ಯ | ಕಲಕೇತ |
| ಕಂಕರಿ ಕಕ್ಕಯ್ಯ | ಕಂಕರಿ ನುಡಿಸುವವ |
| ಕಲಕೇತ ಬ್ರಹ್ಮಯ್ಯ | ಕಲಕೇತ |
| ಕಲಿಕುಂಭರಾಯ | ನಗಿಸುವ ಕಾಯಕ |
| ಕಿನ್ನರಿ ಬ್ರಹ್ಮಯ್ಯ | ಕಿನ್ನರಿ ನುಡಿಸುವವ |
| ಕುಂಬಾರ ಗುಂಡಯ್ಯ | (ಮಡಿಕೆ ಮಾಡುವವ) ನೃತ್ಯ |
| ಪರುಮಳಲೆಯಕುರುಂಬ | ನೃತ್ಯ |
| ಕೋಡುಗದ ಮಾರಣ್ಣ | ಕೋಡುಗ ಕುಣಿಸುವವ |
| ಗಂಗಾದೇವಿ | ರುದ್ರವೀಣೆ ನುಡಿಸುವವಳು |
| ಘಂಟಾಕರ್ಣ | ಗಂಟೆ ಬಾರಿಸುವವ |
| ಗಟ್ಟಿವಾಳಯ್ಯ | ನೃತ್ಯ |
| ಚಾಂಗು ಭೊಲ್ಲಯ್ಯ | ಹೊಗಳುವವ |
| ಚಾರಮರಾಯ | ನೃತ್ಯ |
| ಜಕ್ಕಿರ ಬ್ರಹ್ಮಯ್ಯ | ಮರದ ಗೊಂಬೆ ಕುಣಿಸುವವ |
| ಜೈನಿಷ | ನೃತ್ಯ-ಗೀತೆ |
| ತಲುಗೇಶ ಮಸಣಯ್ಯ | ಕೊಳಲು ಬಾರಿಸುವವ |
| ತಿರುನೀಲಕಂಠ ಶಾಣರು | ಹಾಡುಗಾರ (ಗಾನವಿಶಾರದ) |
| ದೇವರಾದ್ಯ | ಹಾಡುಗಾರ (ಗಾನವಿಶಾರದ) |
| ಧವಳದ ಪಾರ್ವತಿ | ಧವಳ ಹಾಡುವವಳು |
| ಡಕ್ಕೆಯ ಮಾರಯ್ಯ | ಡಕ್ಕೆ ಬಾರಿಸಿ ಮಾರಿ ಕುಣಿಸುವವ |
| ನಗೆ ಮಾರಿ ತಂದೆ | ನಗಿಸುವ ಕಾಯಕ |
| ನಾಟ್ಯನಮಿತ್ತಂಡಿ | ನೃತ್ಯ |
| ಪೋಚಲೆ | ದಂಡಿಗೆ ಬಾರಿಸುವವಳು |
| ಬಹುರೂಪಿ ಚೌಡಯ್ಯ | ವೇಷಗಾರ |
| ಬಿಬ್ಬಿ ಬಾಚಯ್ಯ | ಹಾಸ್ಯಗಾರ |
| ಬಾಚಲೆ | ಮದ್ದಳೆ ಬಾರಿಸುವವಳು |
| ಭದ್ರಗಾಯಕ | ಹಾಡುಗಾರ (ಗಾಯನ) |
| ಮಸರದ ಮಾರಯ್ಯ | ಮಾರಿಯನ್ನು ಗುಡಿಯಲ್ಲಿಟ್ಟು ಕೊಂಡು ತೋರಿಸುವವ |
| ರತ್ನಘೋಷ | ಹಾಡುಗಾರ |
| ರಾಗದ ಸಂಕಣ್ಣ | ಹಾಡುಗಾರ |
| ಲಕ್ಷ್ಮಾ ಭಕ್ತ | ಶಿವಗೀತೆ ಹಾಡುವವ |
| ಲಿಂಗಾಸುದೇವಿ | ಚೆಂಗು ಬಾರಿಸುವವಳು |
| ಸಿಗುರಿ ಚಂದಯ್ಯ | ಗಿರುಗಂಟೆ ಬಾರಿಸುವವ |
| ಸಿದ್ಧದೇವಮ್ಮ | ನೃತ್ಯ, ಸಂಗೀತ |
| ಸಿದ್ಧ ಬುದ್ಧಯ್ಯ | ಹಾಡುಗಾರ |
| ಸಕಳರಸ ಮಾದರಸ | ಹಾಡುಗಾರ”[೨೨] |

ಹೀಗೆ ಅನೇಕ ಪುರಾತನರು ಹಾಗೂ ಬಸವಾದಿ ಶರಣ ಶರಣೆಯರು ವಾದ್ಯ, ಹಾಡು, ನೃತ್ಯ ಮುಂತಾದ ಜನಪದ ಕಲೆಗಳ ಪ್ರದರ್ಶನದ ಮೂಲಕ ಜನಮನಗೆಲ್ಲುವುದರೊಂದಿಗೆ ಶಿವನೊಲುಮೆ ಗಳಿಸಿದ್ದನ್ನು ಅವರ ವಚನಗಳು ತಿಳಿಸುತ್ತವೆ.

ಅಂದು ಸಾಮಾಜಿಕವಾಗಿ ಕೆಳಸ್ತರದಲ್ಲಿರುವ ಶಿವಶರಣರಲ್ಲಿ ಶ್ರೇಷ್ಠ ಕಲಾಕಾರರು ಆಗಿರುವ "ಢಕ್ಕೆಯ ಮಾರಯ್ಯಗಳು ಭಕ್ತರಂಗಳದಲ್ಲಿ ಢಕ್ಕೆಯಂ ಬಾರಿಸಿ, ಮಾರಿಯಂ ಕುಣಿಸಿ, ಉಡಿಯಲ್ಲಿ ತಲೆಯಲ್ಲಿ ಬೇವಿನ ಸೊಪ್ಪಂ ಕಟ್ಟಿಕೊಂಡು ಮಾರಿಯಂ ಮುಂದಿಟ್ಟುಕೊಂಡ, ಆಚಾರವಂ ತೋಜಿ ಸಾರುತ್ತಿಹರು".[-೨೩] ಎಂದು ಭೈರವೇಶ್ವರ ಕಾವ್ಯದಲ್ಲಿ ಶಾಂತಲಿಂಗದೇಶಿಕರು ವರ್ಣಿಸಿದ್ದಾರೆ. "ಬಹುರೂಪಿ ಚೌಡಯ್ಯ, ಕಂಕರಿ ಕಕ್ಕಯ್ಯ, ಕಲಿಕೇತ ಬೊಮ್ಮಯ್ಯ, ವೀಣೆಯ ಸಕಲೇಶ ಮಾದರಸ, ಕುಂಬಾರ ಗುಂಡಯ್ಯ, ಕಿನ್ನರಿ ಬ್ರಹ್ಮಯ್ಯ, ರಾಗದ ಸಂಕಣ್ಣ, ಸಿದ್ಧ ಬುದ್ಧಯ್ಯ, ಭದ್ರಗಾಯಕ, ಜಕ್ಕಿಯರ ಬ್ರಹ್ಮಯ್ಯ ತತ್ತ್ವಪದದ ವೀರದೇವಮ್ಮ, ಜನಪದ ನಾಟ್ಯ ಪ್ರವೀಣೆ ಸಿದ್ಧದೇವಮ್ಮ, ತಂದಾನತಾನದ ಶಿವಮಾಯಿದೇವ, ಮಸಣದ ಮಾರಯ್ಯ, ಇಕ್ಕದ ಮಾರಯ್ಯ ಮೊದಲಾದ ಶರಣ ಶರಣೆಯರ ವಿಶೇಷಣಗಳೇ ಅವರೆಲ್ಲರೂ ೧೨ ನೇ ಶತಮಾನದ ವಚನ ಚಳುವಳಿಯ ಸಂದರ್ಭದ ಜನಪದ ಕಲಾವಿದರೆಂಬುವದನ್ನು ಸಾಬೀತು ಪಡಿಸುತ್ತವೆ"[-೨೪] ಎಂಬ ಅಭಿಪ್ರಾಯ ಗಮನಾರ್ಹವಾಗುತ್ತದೆ.

"ಶರಣರಿಗೆ ಕಾಯಕವೇ ಕಲೆ, ಕಲೆಯೇ ಕಾಯಕವಾಯಿತು. ಕಾಯಕ ಅಥವಾ ಕಲೆ ಕೇವಲ ಹೊಟ್ಟೆ ಹೊರೆಯುವ ವೃತ್ತಿಗಳಿಗೆ ಸೀಮಿತವಾಗಲಿಲ್ಲ. ಕಾಯಕಕ್ಕೆ ದೈವತ್ವ ಸ್ವರೂಪ ತಂದು ಕೊಟ್ಟರು. ಮಾನವೀಯ ನೆಲೆಗಟ್ಟಿನ ಮೇಲೆ ಸುಂದರ ಬದುಕನ್ನು ರೂಪಿಸಿಕೊಂಡರು".[-೨೫] ಇವರ ನಂತರ ಬಂದ ವೀರಶೈವ ಕವಿಗಳು ಶರಣರ ಬದುಕನ್ನು ಕಲಾತ್ಮಕವಾಗಿ ಕಾವ್ಯಗಳಲ್ಲಿ ಹಿಡಿದಿಟ್ಟಿದ್ದಾರೆ. ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಕುಂಬಾರ ಗುಂಡಯ್ಯನನ್ನು ಕುರಿತು ಹರಿಹರ ರಚಿಸಿದ ರಗಳೆ ವಿಶೇಷವಾಗಿದೆ. ಹರಿಹರನ ಈ ರಗಳೆಯಲ್ಲಿ ಗುಂಡಯ್ಯನ ಚರಿತ್ರೆಯನ್ನು ಸೊಗಸಾಗಿ ಮೂಡಿಸಿದ್ದಾನೆ. ಬೀದರ ಜಿಲ್ಲೆಯ ಇತಿಹಾಸದಲ್ಲಿ ಪ್ರಸಿದ್ಧಿ ಪಡೆದ ಊರು 'ಭಲ್ಲುಂಕೆ' ಎಂಬಲ್ಲಿ ಗಡಿಗೆ ತಯಾರಿಸಿ ಮಾರುವ ಕಾಯಕದಲ್ಲಿ ತೊಡಗಿಸಿಕೊಂಡವ ಗುಂಡಯ್ಯ ಆತನ ಸತಿ ಕೇತಲದೇವಿ ಇಬ್ಬರೂ ಶಿವ ಭಕ್ತರಾಗಿದ್ದರು. ಕಾಯಕವೇ ಪೂಜೆ, ಜಪ, ತಪ ಎಂದು ಭಾವಿಸಿದ ಗುಂಡಯ್ಯ ದೈಹಿಕ ಶ್ರಮದೊಂದಿಗೆ ಮಾನಸಿಕ ತಾದಾತ್ಮ್ಯ ಭಾವ ಹೊಂದಿದ ಅವನ ಅಂತರಂಗವು ಶಿವಮಯವಾಗಿತ್ತು. ತಾನು ನಿಷ್ಠೆಯಿಂದ ಮಾಡಿದ ಗಡಿಗೆಗಳನ್ನು ಶಿವಭಕ್ತರಿಗೆ ಕೊಡುವ ದಾಸೋಹ ಭಾವ ಗುಂಡಯ್ಯನಲ್ಲಿತ್ತು. ಅದರ ಚಿತ್ರಣವನ್ನು ಹರಿಹರ ಕವಿ ಸುಂದರವಾಗಿ ಕಟ್ಟಿಕೊಟ್ಟಿದ್ದಾನೆ.

"ಚರಿತದಿಂ ಘಟಕಾಯಕಮಂ ಮಾಡುತೆ
ಪಿಡಿಗುಂಡಂ ತಳದೊಳಗಳವಡಿಸುತೆ
ಎಡಗೈಯ್ಯಂ ಹೊಸ ಕೊಡದೊಳಗಿರಿಸುತೆ
ಕಲು ಹಲಗೆಯನಂತಳವಡೆ ಪಿಡಿವುತೆ
ಚೆಲುವೆನಿಸುವ ಹೊಸ ಘಟಮಂ ಮಾಡುತೆ"[-೨೬]

ಕುಂಬಾರ ಗುಂಡಯ್ಯ ಮಾಡುವ ಗಡಿಗೆ ಅದೊಂದು ಕಲೆಯಾಗಿತ್ತು. ಜಿಗುಟಾದ ನಯವಾದ ಮಣ್ಣನ್ನು ಚಕ್ರದ ಮೇಲಿಟ್ಟು ತನ್ನ ಎಡಗೈಯನ್ನು ಅದರಲ್ಲಿಟ್ಟು ಹಿಡಿಗುಂಡನ್ನು ಹಿಡಿದು ಚಕ್ರ ತಿರುಗಿಸುತ್ತಾ ಮಾಡುವ ನಾನಾ ವಿಧದ ಗಡಿಗೆಯು ಒಂದು ಕ್ರಿಯೆಯಾಗದೆ ಕಲಾತ್ಮಕತೆಯಿಂದ ಕೂಡಿದ ಕಾಯಕವಾಗಿದೆ. ತಾನು ಸಿದ್ಧಪಡಿಸಿದ ಸುಂದರವಾದ ಗಡಿಗೆಯನ್ನು ವಾದ್ಯವನ್ನಾಗಿ ನುಡಿಸುವ ಕಲಾ ನೈಪುಣ್ಯತೆಯನ್ನು ಗುಂಡಯ್ಯನು ಹೊಂದಿದ್ದನು. ಅದನ್ನು ಕವಿಯು ವರ್ಣಿಸುವ ರೀತಿ ಹೀಗಿದೆ.

“ಎಂದಿನ ತೆರದಿಂ ಬಾರಿಸುತಿರೆ
ಸಂದೊಪ್ಪುವ ಘಟಕಾಯಕದಿಂದಿರೆ

ಆ ಘಟವನ್ನು ಬಾರಿಸುತ್ತಿರುತ್ತಾನೆ. ಅದು ಹೇಗೆಂದರೆ ‘ತಟ ಪಟ ದಂದಣ ದಿಂ ಧಿಂ ಧಿಮಿಕೆನೆ, ತಟಕಂ ಕಟದಿಂ ಧಿಕ್ಕಟವೆಂದನೆ’ ಹಲಗೆಯ ಶಬ್ದವನ್ನು ಕರಡೆಯ ಶಬ್ದವನ್ನು ಮೀರುವ ಸುನಾದವನ್ನು ಈ ಮಡಿಕೆಯು ಹೊರಡಿಸುತ್ತಿತ್ತು. ಇದರ ನಾದವು ಹೊಸ ಕಹಳೆಯ ನಾದಂ ತಾಳವು ಕೌಸಾಳದ ಕಳನಾದವಾಗಿತ್ತೆಂದು ಕವಿಯು ಹೇಳುತ್ತಾನೆ.”[೨೭] ಗುಂಡಯ್ಯ ಮೇಲ್ನೋಟದಲ್ಲಿ ಗಡಿಗೆ ಬಾರಿಸಿದರು ಅವನ ಅಂತರಂಗ ಲಯತಾಳ ಬದ್ಧವಾಗಿ ನಾದದೊಂದಿಗೆ ಕುಣಿಯುವುದು ವಿಶಿಷ್ಟವಾಗಿದೆ. ಅವನ ಕುಣಿತಕ್ಕೆ ಶಿವ ಸಂತಸ ಪಟ್ಟು ಕುಣಿಯುವುದು ಮಹತ್ವದಾಗಿದೆ.

“ಆಡುವ ಗುಂಡಯ್ಯನ ಹೊಸ ನೃತ್ಯಂ
ನೋಡುವ ಶಿವನಂ ಮುಟ್ಟಿತು ಸತ್ಯಂ”[೨೮]

ಗುಂಡಯ್ಯನ ಮೋಹಕ ಕುಣಿತಕ್ಕೆ ಶಿವನು ಮರುಳಾಗಿ ಪ್ರತ್ಯಕ್ಷನಾಗಿ ಕುಣಿಯುವುದು ಅದ್ಭುತವಾಗಿದೆ. ಇಲ್ಲಿ ಘಟವಾದ್ಯಕಲೆಯ ಸ್ವರೂಪ ಲಕ್ಷಣ ಹಾಗೂ ಕಾಯಕ ನಿಷ್ಠಾವಂತ ಶಿವಭಕ್ತನಾದ ಕುಂಬಾರ ಗುಂಡಯ್ಯನ ಬದುಕಿನ ವಿವರಗಳು ಇಲ್ಲಿಯಂತೆ ಜನಪದರು ಹಾಡಿನಲ್ಲಿ ಹಿಡಿದಿಟ್ಟ ಬಗ್ಗೆಯೂ ಕಾಣುತ್ತದೆ. ಗುಂಡಯ್ಯನ ಕಾಯಕದೊಂದಿಗೆ ಏಕಾಗ್ರತೆಯ ಕುಣಿತದ ಭಾವ ಹಾಡಿನಲ್ಲಿದ್ದು, ಆ ಕಾಲದಲ್ಲಿಯ ಈ ಕಲೆಯ ಅದ್ಭುತತೆ ಇಲ್ಲಿ ಕಾಣಸಿಗುತ್ತದೆ.

ಬೀದರ ಜಿಲ್ಲೆ ಪ್ರಾಚೀನ ಶಿಲ್ಪಕಲೆಗಳಲ್ಲಿಯೂ ಜನಪದರ ಆಭರಣ ಮತ್ತು ವಾದ್ಯಗಳ ಉಲ್ಲೇಖಗಳು ಕಂಡುಬರುತ್ತವೆ. “ಬಸವಕಲ್ಯಾಣದ ಕೋಟೆಯ ಒಳಗಡೆ ಬಹು ಮುಕ್ಕಾದ ಒಂದು ಸುಂದರ ಚಾಮುಂಡಿ ಶಿಲ್ಪವಿದೆ. ಇವಳ ಕಾಲುಗಳ ಬದಿಯಲ್ಲಿ ತಾಳ, ಡಮರು, ಕೊಳಲು ಮದ್ದಳೆಗಳನ್ನು ಹಿಡಿದು ಬಾರಿಸುವ ವಾದ್ಯಮೇಳವಿದೆ.”[೨೯] ಬೀದರ ಜಿಲ್ಲೆಯ ಹಲವಾರು ಗ್ರಾಮಗಳಲ್ಲಿ ಕಾಳಿಯ ಶಿಲ್ಪಗಳಿವೆ. “ಇವುಗಳಲ್ಲಿ ಲಕಣಗಾಂ, ಅಂಬೆ ಸಂಗವಿ, ಮೆಹಕೆರ (ಭಾಲ್ಕಿ ತಾಲ್ಲೂಕ), ಬಸವಕಲ್ಯಾಣ. ಖಂಡಾಳ (ಬಸವ ಕಲ್ಯಾಣ ತಾಲ್ಲೂಕು) ಹಾಗೂ ಜಲಸಂಗಿ ಗ್ರಾಮದ ಶಿಲ್ಪಗಳು ಮುಖ್ಯವಾಗಿವೆ. ಸಾಮಾನ್ಯವಾಗಿ ಕಾಳಿಯು ಚತುರ್ಭುಜಧಾರಿಯಾಗಿದ್ದು ಪದ್ಮಾಸನದಲ್ಲಿ ಕುಳಿತಿರುವಳು. ಕೈಗಳಲ್ಲಿ ಖಡ್ಗ, ಡಮರು, ತ್ರಿಶೂಲ ಮತ್ತು ಕಪಾಲಗಳನ್ನು ಹಿಡಿದಿರುವಳು”[೩೦] ಎಂಬುದು ಗಮನಾರ್ಹವಾಗಿದೆ. ಆ ಕಾಲದ ಶಿಲ್ಪ ಹಾಗೂ ಹಲವು ವಾದ್ಯಗಳ ಪರಿಚಯದ ಹಿನ್ನೆಯಲ್ಲಿ ಹಲವು ಜನಪದ ಕಲೆಗಳನ್ನು ಗುರುತಿಸಬಹುದಾಗಿದೆ.

ಬಸವಕಲ್ಯಾಣ ತಾಲ್ಲೂಕಿನ ನೀಲಕಂಠ ಗ್ರಾಮದ ಮಾರುತಿ ದೇವಾಲಯದಲ್ಲಿರುವ ಮಹಾಲಕ್ಷ್ಮಿಯ ಶಿಲ್ಪಗಳು ವಿಶೇಷವಾಗಿವೆ. “ದೇವಿಯು ಸಮಭಂಗಿಯಲ್ಲಿ ನಿಂತಿದ್ದು ಈಕೆಗೆ ಚತುರ್ಭುಜಗಳಿವೆ. ಕೈಗಳಲ್ಲಿ ಫಲ, ಗದೆ, ಡಾಲು (ಖೇತಕ) ಮತ್ತು ಬಟ್ಟಲುಗಳನ್ನು ಕ್ರಮವಾಗಿ ಕೆಳಗಿನ ಬಲಗೈಯಲ್ಲಿ ಹಿಡಿದಿರುವಳು. ಅರ್ಧಗಂಬ ತೋರಣಗಳಿಂದಲು ಸುತ್ತಲು ಅಲಂಕರಿಸಲಾಗಿದೆ. ಕಿರೀಟ ಮುಕುಟ, ಕುಂಡಲ, ಕಂಠಹಾರ ಕಟಿಸೂತ್ರ, ವಸ್ತ್ರ, ಬಳೆ, ತೋಳುಬಂದಿ, ಸೊಂಟಪಟ್ಟಿ, ಕಡಗ ಇತ್ಯಾದಿ ವಸ್ತ್ರಾಭರಣ ಭೂಷಿತಳಾಗಿದ್ದಾಳೆ”[೩೧] ಎಂಬಲ್ಲಿ ಜನಪದ ಆಭರಣ ಕಲೆಗಳ ಉಲ್ಲೇಖವು ಎದ್ದು ತೋರುತ್ತದೆ.

ಈ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಪೂರ್ವ ದಿಕ್ಕಿನಲ್ಲಿ ಮೂರು ಕಿ.ಮೀ. ದೂರದಲ್ಲಿರುವ ಚಿಕ್ಕ ಗ್ರಾಮ ನಾರಾಯಣಪುರ. ಇಲ್ಲಿರುವ “ನಾರಾಯಣ ದೇವಸ್ಥಾನದಲ್ಲಿ ನಾಲ್ಕು ಅಡಿ ಎತ್ತರದ ತಿಳಿ ಕಪ್ಪು ಕಲ್ಲಿನಲ್ಲಿ ಕೆತ್ತಿರುವ ಪದ್ಮಾವತಿಯ ಶಿಲ್ಪ ತುಂಬಾ ಸುಂದರವಾಗಿದೆ. ಸೊಂಟದಲ್ಲಿನ ಆಭರಣಗಳು ತೊಡೆಯವರೆಗೂ ಜೋತು ಬಿದ್ದಿದ್ದು ಕೈ ಕಾಲುಗಳಲ್ಲಿ ಕಡಗ, ಚೈನುಗಳು ಎಡಗೈಯಲ್ಲಿ ಗಿಣಿಯು ಕುಳಿತು ಅವಳ ಮುಖದ

ಸಮೀಪ ಹೋಗಿ ಏನೋ ಸಂದೇಶ ಹೇಳುವಂತಿದೆ. ಕೈ ಬೆರಳಿನಲ್ಲಿ ಸುಂದರವಾದ ಉಂಗುರಗಳು ಬಲಗೈನಲ್ಲಿ ನಾದ ಹೊರಡಿಸುವ ಒಂದು ವಾದ್ಯ, ಕಿವಿಯಲ್ಲಿ ಸೂಕ್ಷ್ಮ ಕೆತ್ತನೆಯ ಓಲೆಗಳು. ಕೊರಳಹಾರ, ನೀಳ ಕೇಶರಾಶಿ ಪ್ರತಿಯೊಂದು ಈ ಮೂರ್ತಿಯಲ್ಲಿ ಅತ್ಯಂತ ಸೂಕ್ಷ್ಮವಾಗಿ ಕೆತ್ತನೆ ಮಾಡಿರುವುದು ಕಂಡುಬರುತ್ತದೆ. ಹದಿನಾಲ್ಕು ಅರ್ಧಕಂಬಗಳಿಂದ ಕೂಡಿದ ಮತ್ತೊಂದು ರಂಗ ಮಂಟಪ ಮಧ್ಯದಲ್ಲಿ ಗರ್ಭ ಗೃಹದ ದ್ವಾರಕ್ಕೆ ಮುಖಮಾಡಿ ಕುಳಿತಿರುವ ನಂದಿ ಸ್ಥಾಪನೆ ಮಾಡಲಾಗಿದೆ. ಕಂಬಗಳು ಮೂರು ತುಲ ವಿನ್ಯಾಸಗಳು ಒಂದರ ಮೇಲೆ ಒಂದು ಬಿದ್ದಂತೆ ಇದ್ದು, ಮಧ್ಯದಲ್ಲಿ ಗೋಪುರ ಕೆತ್ತಲಾಗಿದೆ. ವರ್ತುಲಾಕಾರದ ಈ ಕಂಬಗಳ ಮೇಲೆ ನೃತ್ಯ ಭಂಗಿಯ ಸ್ತ್ರೀ ಶಿಲ್ಪಗಳು ಮನಮೋಹಕವಾಗಿ ಕೆತ್ತಲಾಗಿದೆ. ಈ ಸ್ತ್ರೀಯರು ಡೊಳ್ಳು ಡೋಲಕ್‌ಗಳನ್ನು ಹಿಡಿದು ನರ್ತಿಸುತ್ತಿದ್ದ"[೨೧] ದೃಶ್ಯ ಆಕರ್ಷಕವಾಗಿವೆ.

"ಬಹಮನಿ ಅರಸರ ಕಾಲದ ವಾಸ್ತು ಶಿಲ್ಪಗಳು ಇತಿಹಾಸದಲ್ಲಿ ಒಂದು ಹೊಸ ರೀತಿಯನ್ನೇ ಪ್ರಾರಂಭಿಸಿದವು. ಮೊದಲಿದ್ದ ವಾಸ್ತು ಸಂಪ್ರದಾಯವನ್ನು ಹಿಂದೆ ಸರಿಸಿ ದೆಹಲಿ ಸುಲ್ತಾನರ ಆಶ್ರಯದಲ್ಲಿದ್ದ ಪಶ್ಚಿಮ ಏಷ್ಯಾದಲ್ಲಿ ಪ್ರಸಿದ್ಧವಾಗಿದ್ದ ಇಸ್ಲಾಮೀ ಕಲೆಯನ್ನು ಇಲ್ಲಿ ರೂಢಿಗೆ ತಂದರು."[೨೨] ಇದೇ ಆಳರಸರ ಕಾಲದಲ್ಲಿ ಬಿದ್ರಿ ಕಲೆಯಿಂದಾಗಿ ಬೀದರ ಜಿಲ್ಲೆ ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸುವುದರೊಂದಿಗೆ ಕಲಾ ಜಗತ್ತಿಗೆ ತನ್ನದೇ ಆದ ಕೊಡುಗೆ ನೀಡಿದೆ. ಜಿಲ್ಲೆಯ ಮಣ್ಣಿನ ವಿಶೇಷ ಶಕ್ತಿಯಿಂದ ಈ ಕಲೆ ದೇಶ ವಿದೇಶದಲ್ಲಿಯೂ ಪ್ರಸಿದ್ಧವಾಗಿದೆ.

ಮುಸ್ಲಿಂ ಆಳರಸರ ಸಂದರ್ಭದಲ್ಲಿಯೇ ವಿಶೇಷವಾಗಿ ಅಲಾಯಿ ಕುಣಿತ ಪೈತ್ರಿ ಹಾಡುಗಳು ಗಂಡಸರಿಂದ ಪ್ರಚಾರಕ್ಕೆ ಬಂದಂತಿದೆ. ನಂತರದ ಸಂದರ್ಭದಲ್ಲಿ ಅನೇಕ ಉಳಿದ ಕಲೆಗಳು ರಾಜರ ಕಲಾಕಾರರ ಪ್ರೋತ್ಸಾಹದಿಂದ ಮನರಂಜನೆಯ ಕಲೆಗಳಾಗಿ, ವೃತ್ತಿ ಕಲೆಗಳಾಗಿ, ಹಾಗೂ ಹವ್ಯಾಸಿ ಕಲೆಗಳಾಗಿ ಉಳಿದುಕೊಂಡು ಬಂದವು. ದೇಶ ಸ್ವಾತಂತ್ರವಾಗುವ ಪೂರ್ವದಲ್ಲಿ ಹೈದ್ರಾಬಾದ ನಿಜಾಮನ ಆಳ್ವಿಕೆಯ ಸಂದರ್ಭದಲ್ಲಿ ಅನೇಕ ಜನಪದ ಕಲೆಗಳು ಗುಪ್ತಗಾಮಿನಿಯಾಗಿದ್ದುಕೊಂಡು ಅಲ್ಲಲ್ಲಿ ಕೆಲ ಮಟ್ಟಿಗೆ ಪ್ರದರ್ಶನಗೊಳ್ಳುತ್ತಾ ಜೀವಂತವಾಗಿ ಉಳಿದುಕೊಂಡು ಬಂದಿವೆ. ಇಂಥ ಜನಪದ ಕಲೆಗಳಿಗೆ ಆಶ್ರಯ ನೀಡಿದ ತಾಣಗಳೆಂದರೆ ಈ ಜಿಲ್ಲೆಯ ಹಿಂದೂ ದೇವಾಲಯಗಳು, ಲಿಂಗಾಯತ ಮಠಗಳು ಕನ್ನಡ ಪ್ರೇಮಿಗಳ ಮನೆಗಳು ಕಲಾಕಾರರು ವಾಸಿಸುವ ತಾಣಗಳು ಎನ್ನಬಹುದು. ಈ ಹಿನ್ನೆಲೆಯಲ್ಲಿ ಬೆಳೆದು ಬಂದ ಕಲೆಗಳಲ್ಲಿ ಭಜನೆ ಹಾಡುಗಳು, ಲಾವಣಿ ಪದಗಳು, ಗೊಂದಲ ಹಾಡುಗಳು, ಭೂತೇರ ಕುಣಿತ, ಡೊಳ್ಳು ಕುಣಿತ, ವಾದ್ಯ ಬಾರಿಸುವ ಕಲೆಗಳು, ರಂಗೋಲಿ, ಕೌದಿ, ಕಸೂತಿ ಮುಂತಾದವುಗಳನ್ನು ಗುರುತಿಸಬಹುದು. ದೇಶ ಸ್ವಾತಂತ್ರ್ಯವಾದ ನಂತರ ಮೈಕೊಡವಿಕೊಂಡು ಎದ್ದ ಅನೇಕ ಕಲೆಗಳಲ್ಲಿ ಈ ಪದ್ರೇಶದ ಮಣ್ಣಿನ ವಾಸನೆ, ಭಾಷಾ ಬಳಕೆ, ಆರಾಧನಾ ಪದ್ಧತಿ, ನಂಬಿಕೆ, ಆಚರಣೆಗಳು, ಉತ್ಸವ ಸಂದರ್ಭಗಳು ಎದೆ ಸೆಟೆಸಿ ನಿಂತು ತಮ್ಮದೆ ಆದ ಸಾಂಸ್ಕೃತಿಕ ಸ್ವರೂಪವನ್ನು ಜಾನಪದ ಜಗತ್ತಿಗೆ, ನೀಡಿವೆ ಹಾಗೂ ಬೀದರ ಜಿಲ್ಲೆಯ ಜಾನಪದ ಕಲಾ ಪರಂಪರೆ ಮುಂದುವರಿಸಿಕೊಂಡು ಬಂದಿವೆ ಎಂದು ಹೇಳಬಹುದು.

# ಅಡಿ ಟಿಪ್ಪಣಿ

೧. ಧಬಾಲೆ ಗುರುಲಿಂಗಪ್ಪ, ಬೀದರ ಜಿಲ್ಲೆಯ ಅನುಭಾವಿ ಕವಿಗಳು, ಪುಟ–೧೧ ಪ್ರ.ವ.–೨೦೦೬.
೨. ಗುಂದಗಿ ಶಿವಾನಂದ ಮಹಾದೇವಪ್ಪ, ಬಾವಗೆ ವೀರಶೆಟ್ಟಿ, ಬೀದರ ಜಿಲ್ಲೆಯ ಸಾಹಿತ್ಯಾವಲೋಕನ, ಪು–೧ ಪ್ರ.ವ.–೧೯೯೮.
೩. ಸಿ, ಕೊಟ್ರಪ್ಪ, ಬೀದರ ಜಿಲ್ಲೆಯ ಜನಪದ ಕಥನ ಗೀತೆಗಳು ಅಪ್ರಕಟಿತ ಸಂಶೋಧನಾ ಮಹಾಪ್ರಬಂಧ, ಪು–೧೧ ಪ್ರ.ವ.–೨೦೧೦.
೪. ಧಬಾಲೆ ಗುರುಲಿಂಗಪ್ಪ, ಬೀದರ ಜಿಲ್ಲೆಯ ಅನುಭಾವಿ ಕವಿಗಳು, ಪು.–೧೫ ಪ್ರ.ವ.–೨೦೦೬.
೫. ಸಿಂಪಿ ವೀರೇಂದ್ರ ಪುಣ್ಯಶೆಟ್ಟಿ ಪಂಚಾಕ್ಷರಿ (ಸಂ) ಬೀದರ ಜಿಲ್ಲಾ ದರ್ಶನ, ಪು.–೧ ಪ್ರ.ವ.–೧೯೯೭.
೬. ಧಬಾಲೆ ಗುರುಲಿಂಗಪ್ಪ, ಬೀದರ ಜಿಲ್ಲೆಯ ಅನುಭಾವಿ ಕವಿಗಳು, ಪು.–೧೯ ಪ್ರ.ವ.–೨೦೦೬.
೭. ಹಿರೇಮಠ ಸೂಗಯ್ಯ, ಜನಪದ ಸಂಸ್ಕೃತಿ, ಪು.–೬೮ ಪ್ರ.ವ.–೨೦೦೬.
೮. ಶರ್ಮಾ ಎಲ್. ಸುಖದೇವ, ಉತ್ತರ ಕರ್ನಾಟಕದ ಜನಪದ ಧಾರ್ಮಿಕ ಕಲೆಗಳ ಒಂದು ಅಧ್ಯಯನ ಅಪ್ರಕಟತ ಸಂಶೋಧನಾ ಮಹಾಪ್ರಬಂಧ, ಪು.೪೨– ಪ್ರ.ವ.೨೦೦೪.
೯. ಅಂಬಳಿಕೆ ಹಿರಿಯಣ್ಣ, ಶಾಲಿನಿ ರಘುನಾಥ, ಜನಪದ ಕಲೆ ಅವಲೋಕನ ಪು–೩೭ ಪ್ರ.ವ.–೨೦೧೦.
೧೦. ಖಂಡೋಬಾ ಪಿ. ಕೆ. ಜಾನಪದ ಮುನ್ನೋಟ ಪುಟ–೯೧ ಪ್ರ..ವ.–೧೯೯೩.
೧೧. ಹಿ. ಚಿ. ಬೋರಲಿಂಗಯ್ಯ (ಸಂ) ಕರ್ನಾಟಕ ಜನಪದ ಕಲೆಗಳ ಕೋಶ, ಪು -x–ಪ್ರ..ವ.–೧೯೯೬.
೧೨. ಹಿರೇಮಠ ಸೂಗಯ್ಯ, ಜಾನಪದ ಸಂಸ್ಕೃತಿ, ಪುಟ–೫೦ ಪ್ರ.ವ.–೨೦೦೬.
೧೩. ಹಕಾರಿ ದೇವೇಂದ್ರಕುಮಾರ, ಜಾನಪದಸಮ್ಮುಖ, ಪುಟ ೨೦ ಪ್ರ.ವ.–೧೯೮೩.
೧೪. ಹಕಾರಿ ದೇವೇಂದ್ರಕುಮಾರ, ಜಾನಪದಸಮ್ಮುಖ, ಪುಟ–೨೦ ಪ್ರ.ವ.–೧೯೮೩.
೧೫. ಹಿರೇಮಠ ಸೂಗಯ್ಯ, ಜಾನಪದ ಸಂಸ್ಕೃತಿ, ಪುಟ–೧೬ ಪ್ರ.ವ.–೨೦೦೬.
೧೬ ಡಿ. ಲಿಂಗಯ್ಯ, ಕೆ, ಆರ್, ಸಂಧ್ಯಾರೆಡ್ಡಿ ಜಾನಪದ ಸ್ವರೂಪ ಮತು ಸಾಹಿತ್ಯ, ಪುಟ–೧೦೦ ಪ್ರ.ವ.–೧೯೯೭.
೧೭. ಯಾಳವಾರ ಸೋಮನಾಥ, ಪ್ರೇಮಾ ಸಿರ್ಸೆ (ಸಂ) ಬೀದರ ಜಿಲ್ಲಾ ದರ್ಶನ, ಪುಟ–೫ ಪ್ರ.ವ.–೨೦೦೫.
೧೮. ಬಸವಣ್ಣನವರ ವಚನಗಳು(ಸಂ) ಡಾ. ಆರ್. ಸಿ. ಹಿರೇಮಠ, ಪುಟ–೯೪ ವ.ಸಂ.೪೯೩ ಪ್ರ.ವ–೧೯೮೮.
೧೯. ಹಿರೇಮಠ ಸೂಗಯ್ಯಾ, ಜನಪದ ಸಂಸ್ಕೃತಿ, ಪುಟ–೧೭ ಪ್ರ.ವ.–೨೦೦೬.
೨೦. ಹಿರೇಮಠ ಸೂಗಯ್ಯ, ಜಾನಪದ ಸಂಸ್ಕೃತಿ, ಪುಟ–೨೭–ಪ್ರ.ವ.–೨೦೦೬.
೨೧. ಬಿ. ಆರ್. ಹಿರೇಮಠ ಸಂಕೀರ್ಣ ವಚನ ಸಂಪುಟ–ಮೂರು ವ.ಸಂ ೧೩೪,ಪು–೫೭ ಪ್ರ.ವ.–೧೯೯೩.
೨೨. ಹಿರೇಮಠ ಸೂಗಯ್ಯ, ಜಾನಪದ ಸಂಸ್ಕೃತಿ, ಪುಟ–೨೧/೨೨ ಪ್ರ.ವ.–೨೦೦೬.
೨೩ ಶಾಂತಲಿಂಗದೇಶಿಕ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ, ಪುಟ–೨೪೪ ಪ್ರ.ವ.–೧೯೬೪.
೨೪. ನಾವಲಗಿ ಸಿ. ಕೆ. ವಚನ ಸಾಹಿತ್ಯ ಮತ್ತು ಜಾನಪದ, ಪುಟ.–೯೧ ಪ್ರ.ವ.–೧೯೯೭.
೨೫. ದಬ್ಬಾ ಸಿದ್ಧಲಿಂಗ, ನಡುಗನ್ನಡ ವೀರಶೈವ ಕಾವ್ಯಗಳಲ್ಲಿ ಜಾನಪದ ಅಧ್ಯಯನ ಅಪ್ರಕಟಿತ ಪಿ.ಎಚ್.ಡಿ ಸಂಶೊಧನಾ ಮಹಾಪ್ರಬಂಧ, ಪುಟ,೧೩೮/೧೩೪.
೨೬. ಯಾಳವಾರ ಸೋಮನಾಥ, ಕುಂಬಾರ ಗುಂಡಯ್ಯ, ಪುಟ–೨೨ ಪ್ರ.ವ.–೨೦೦೬.
೨೭. ಯಾಳವಾರ ಸೋಮನಾಥ, ಕುಂಬಾರ ಗುಂಡಯ್ಯ, ಪುಟ–೨೪ ಪ್ರ.ವ.–೨೦೦೬.
೨೮. ಯಾಳವಾರ ಸೋಮನಾಥ, ಕುಂಬಾರ ಗುಂಡಯ್ಯ, ಪುಟ–೨೬ ಪ್ರ.ವ.–೨೦೦೬.
೨೯. ಖಂಡೋಬಾ ಪಿ. ಕೆ., ಪಾಟೀಲ. ಎಸ್. ಸಿ. (ಸಂ) ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ ಲಲಿತಕಲೆಗಳ ಸಂಪುಟ, ಪು–೨೪೧ ಪ್ರ.ವ.–೨೦೧೨.
೩೦. ಖಂಡೋಬಾ ಪಿ. ಕೆ., ಪಾಟೀಲ. ಎಸ್. ಸಿ. (ಸಂ) ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ ಲಲಿತಕಲೆಗಳ ಸಂಪುಟ, ಪು–೨೪೩ ಪ್ರ.ವ.–೨೦೧೨.
೩೧. ಖಂಡೋಬಾ ಪಿ. ಕೆ., ಪಾಟೀಲ. ಎಸ್. ಸಿ. (ಸಂ) ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ ಲಲಿತಕಲೆಗಳ ಸಂಪುಟ, ಪು–೨೪೨ ಪ್ರ.ವ–೨೦೧೨.
೩೨. ಖಂಡೋಬಾ ಪಿ. ಕೆ., ಪಾಟೀಲ. ಎಸ್. ಸಿ. (ಸಂ) ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯ ಕೋಶ ಲಲಿತಕಲೆಗಳ ಸಂಪುಟ, ಪು–೨೬೪/೨೬೫ ಪ್ರ.ವ.–೨೦೧೨.
೩೩. ವೀರೇಂದ್ರ ಸಿಂಪಿ, ಪಂಚಾಕ್ಷರಿ ಪುಣ್ಯಶೆಟ್ಟಿ (ಸಂ), ಬೀದರ ಜಿಲ್ಲಾ ದರ್ಶನ, ಪು–೧೯ ಪ್ರ.ವ.–೧೯೯೭.